WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (0), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಜುಲೈ 2011

॥ ಧಿಯೋ ಯೋನಃ ಪ್ರಚೋದಯಾತ್ ॥


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-11 ಸಂಚಿಕೆ-7 ಪುಟಗಳು-10 Registered Under No.J/UDP/1260/2009-2011 Dated from 01-12-2008 to 31-12-2011.

ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು
ಪುಟ-2



'ನಂದೊಳಿಗೆ ಮುದ್ದಣ'
ಲೇಖಕರು : ನಂದಳಿಕೆ ಬಾಲಚಂದ್ರರಾವ್
ರಡ್ಡ್‌ಪಾತೆರ : ವೈ. ಮೋಹನ್‌ರಾವ್
ಪುಟ-3



ಸ್ವೀಡನ್ ದೇಶದ ಪ್ರವಾಸ ಅನುಭವಗಳು
ಡಾ। ವೈ. ರವೀಂದ್ರನಾಥ ರಾವ್, ಬ್ರಹ್ಮಾವರ
ಪುಟ-5



ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ
- ಡಾ। ಎಚ್.ವಿ.ನರಸಿಂಹಮೂರ್ತಿ
ಪುಟ-7

ಅದ್ವೈತ ಭಾರತೀಯ ಕಮ್ಯುನಿಟಿ ಡೆವಲಪ್‌ಮೆಂಟ್ ಮತ್ತು ಎಜ್ಯುಕೇಶನ್ ಟ್ರಸ್ಟ್ ಇನ್ನಾ ಮತ್ತು ಡಾ। ದಯಾನಂದ ಎಸ್.ರಾವ್, ಬೆಂಗಳೂರು

## ಇನ್ನಾ, ಫಲಿಮಾರ್, ಬೆಳ್ಮಣ್ : ಉಚಿತ ಬರೆಯುವ ಪುಸ್ತಕ ವಿತರಣೆ




ಇನ್ನಾ ದಿನೇಶ್ ರಾವ್ ಸ್ಮರಣಾರ್ಥ ಉಚಿತ ನೋಟ್ ಪುಸ್ತಕ ವಿತರಣೆ ಮತ್ತು ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಸಮಾರೋಪ ಮೇ ತಿಂಗಳಲ್ಲಿ 10ರಿಂದ 30 ತಾರೀಖಿನ ವರೆಗೆ 20 ದಿನಗಳ ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್, ಇನ್ನಾ ಫಲಿಮಾರ್, ಬೆಳ್ಮಣ್‌ನಲ್ಲಿ ನಡೆಯಿತು. ಇದರ ಸದುಪಯೋಗವನ್ನು ಸುಮಾರು 350 ಮಕ್ಕಳು ಪಡೆದುಕೊಂಡರು.

ಸಮಾರೋಪ ಸಮಾರಂಭದಲ್ಲಿ ಡಾ। ದಯಾನಂದ ಯಸ್.ರಾವ್ ಇವರ ನಿರಖು ಠೇವಣಿ ರೂ.3,50,000ದ ಬಡ್ಡಿಯಿಂದ ಮತ್ತು ABCD& E ಟ್ರಸ್ಟ್ ವತಿಯಿಂದ ಸುಮಾರು 80 ಸಾವಿರ ಮೌಲ್ಯದ ಬರೆಯುವ ಪುಸ್ತಕವನ್ನು ವಿತರಿಸಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಐ.ಚಂದ್ರಕಾಂತ ರಾವ್ ಮಾತಾಡಿ ಈ ಕಾರ್ಯಕ್ರಮ ನಿರಂತರ ನಡೆಯುತ್ತದೆ ಹಾಗೂ ಹಳ್ಳಿಯ ಮಕ್ಕಳು ಇಂಗ್ಲೀಷ್‌ನಲ್ಲಿ ಹಿಂದುಳಿಯಬಾರದೆಂಬ ಉದ್ದೇಶ ಇದೆ ಎಂದರು. ಸಮಾರಂಭದಲ್ಲಿ ವಿಮಲಾ ದಿನೇಶ ರಾವ್ ಪುಸ್ತಕ ವಿತರಿಸಿದರು. ಐ. ಜಗದೀಶ ರಾವ್, ಡಾ। ಶ್ರೀಕಾಂತ್ ರಾವ್, ಲಕ್ಷ್ಮೀಕಾಂತ್ ರಾವ್, ವೇದಾವತಿ ಎಲ್.ರಾವ್, ಶಶಿರೇಖಾ ರತ್ನಾಕರ ರಾವ್, ಸುಪ್ರಿಯ ಸಿ.ರಾವ್, ಉಷಾಕಿರಣ್ ಯನ್. ರಾವ್ ಮತ್ತು ರಮಾಕಾಂತ ರಾವ್ ಶುಭ ಹಾರೈಸಿದರು. ಜೇಸಿ ಟ್ರಸ್ಟ್ ಅಧ್ಯಕ್ಷ ಜಯಂತ ರಾವ್ ಪಿ ಮತ್ತು ಸಂಯೋಜಕ ಯನ್ ಸುಧಾಕರ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಕೋಶಾಧಿಕಾರಿ ವೇದಾವತಿ ಎಲ್.ರಾವ್ ವಂದಿಸಿದರು. ಇನ್ನ ಪ್ರಾಥಮಿಕ ಶಾಲೆಯಲ್ಲಿ ಡಾ। ನೀಲಕಂಠ ಕುಂಭಕೋಣಂ, ಮನೋಹರಿ ನೀಲಕಂಠ ಇವರು ಇನ್ನಾ ಪ್ರಾಥಮಿಕ ಶಾಲೆಗೆ ಪುಸ್ತಕ ವಿತರಿಸಿದರು. ಜೇಸಿ ಅಧ್ಯಕ್ಷ ಸತೀಶ್ ಮತ್ತು ಕಾರ್ಯದರ್ಶಿ ಸರ್ವಜ್ಞತಂತ್ರಿ ಉಪಸ್ಥಿತರಿದ್ದು ಯನ್ ಸುಧಾಕರ್ ರಾವ್ ಕಾರ್ಯಕ್ರಮದ ಪ್ರಸ್ತಾವನೆ ಮಾಡಿ ವಂದಿಸಿದರು.

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ-ಶಂಕರ ಜಯಂತಿ ಆಚರಣೆ

ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ ಶಂಕರ ಜಯಂತಿ ಕಾರ್ಯಕ್ರಮವು ತಾ.15-5-2011ನೇ ಭಾನುವಾರ ಅಪರಾಹ್ನ 3 ಗಂಟೆಯಿಂದ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀಮತಿ ಮತ್ತು ಶ್ರೀ ಮನೋಹರ ರಾಯರ ಗೃಹದಲ್ಲಿ ನೆರವೇರಿತು. ಪುರೋಹಿತರಾಗಿ ವೇದಮೂರ್ತಿ ಶ್ರೀ ನಿರಂಜನ ಭಟ್ಟರು ರುದ್ರ ಪಾರಾಯಣ ರುದ್ರಾಭೀಷೇಕಗಳೊಂದಿಗೆ ಪೂಜಾ ವಿಧಿಗಳನ್ನು ನೆರವೇರಿಸಿದರು. ಕಾರ್ಕಳದ ಶಾರದಾ ಭಜನಾ ಮಂಡಳಿಯವರು ಹಾಗೂ ಶಂಕರ ಪ್ರತಿಷ್ಠಾನದ ಮಹಿಳಾ ವಿಭಾಗದ ಸದಸ್ಯೆಯರು ಭಜನಾ ಕಾರ್ಯಕ್ರಮವನ್ನಿತ್ತರು. ಅನಂತರ ಶ್ರೀ ಶ್ರೀ ಶಂಕರ ಭಗವತ್ಪಾದರ 'ಭಜಗೋವಿಂದಂ'ನ ಪ್ರತಿಚರಣವನ್ನು ಶಾಸ್ತ್ರೋಕ್ತವಾದ, ಸುಶ್ರಾವ್ಯವಾದ ರಾಗದಲ್ಲಿ ಪುರಪುವಿಜಯಕುಮಾರರ ಪುತ್ರಿ ಕುಮಾರಿ ಅಖಿಲ ಹಾಡಿದರು. ಪ್ರತಿಚರಣದೊಂದಿಗೆ ಶ್ರೀ ನಿರಂಜನ ಭಟ್ಟರು ಅದರ ವ್ಯಾಖ್ಯಾನವನ್ನು ಮಾಡಿದರು. ಸಾಧಾರಣ ಒಂದು ಗಂಟೆಯ ಈ ಕಾರ್ಯಕ್ರಮವು ಎಲ್ಲರ ಮನದಲ್ಲಿ ಜೀವನ ತತ್ವಗಳನ್ನು ಹಾಗೂ ಭಕ್ತಿಭಾವನೆಗಳನ್ನು ಬಡಿದೆಬ್ಬಿಸಿತು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶ್ರೀ ಬೊಳ್ಳಾವ ಸತ್ಯಶಂಕರರು ಸಂಕ್ಷಿಪ್ತವಾಗಿ ಜಗದ್ಗುರು ಶಂಕರಾಚಾರ್ಯರ ಸಾಧನೆಗಳನ್ನು ತಿಳಿಸಿದರು. ಮೇ ತಿಂಗಳ 24, 25, 26ರಂದು ಕೋಟೆಕಾರಿನ ಶೃಂಗೇರಿ ಮಠಕ್ಕೆ ಶೃಂಗೇರಿಯ ಜಗದ್ಗುರುಗಳು ಬಂದು ಗುರು ವಂದನೆಯನ್ನು ಸ್ವೀಕರಿಸುವರೆಂದೂ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದೂ ಕರೆಯಿತ್ತರು.

ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಿದ ಶ್ರೀಮತಿ ಮತ್ತು ಶ್ರೀ ಮನೋಹರ ರಾಯರು ತಮ್ಮ ಮನೆಯಲ್ಲಾದ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಾದ ಸದಸ್ಯ ಸದಸ್ಯೆಯರಿಗೆ ಅಭಿವಂದನೆಯನ್ನು ಸಲ್ಲಿಸಿದರು. ಅವರು ಶ್ರೀ ನಿರಂಜನ ಭಟ್ಟರಿಗೆ ಹಾಗೂ ಕುಮಾರಿ ಅಖಿಲ ಇವರಿಗೆ ಸ್ಮರಣಿಕೆಗಳನ್ನು ಇತ್ತರು. ಶ್ರೀಮತಿ ಶೈಲಜಾ ರತ್ನಾಕರ ಇವರು ಧನ್ಯವಾದವಿತ್ತರು. ಕಾರ್ಯಕ್ರಮದ ಕೊನೆಯಲ್ಲಿ ಉತ್ತಮವಾದ ಫಲಾಹಾರವನ್ನು ಸ್ವೀಕರಿಸಿ ಸದಸ್ಯರು ತೃಪ್ತಿಪಟ್ಟರು.

ವರದಿ : **ರಾಮಮೋಹನ ರಾವ್**

## ಚಿಕ್ಕಮಗಳೂರು : 9ನೇ ಸಾಹಿತ್ಯ ಸಮ್ಮೇಳನ ಕವಿಗೋಷ್ಠಿ



**ಚಿಕ್ಕಮಗಳೂರು ಜಿಲ್ಲಾ 9ನೇ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷ ಸ್ಥಾನವಹಿಸಿ ಕಾಸರಗೋಡಿನ ಪ್ರಸಿದ್ಧ ಸಾಹಿತಿ ಶ್ರೀ ಶ್ರೀಕೃಷ್ಣಯ್ಯ ಅನಂತಪುರ ಮಾತನಾಡುತ್ತಿದ್ದಾರೆ.**

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ
### ಮಹಿಳಾ ವೇದಿಕೆ
## ವರಮಹಾಲಕ್ಷ್ಮೀ ವ್ರತ

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಆಚರಣೆಯು ತಾ.12-08-2011ರಂದು ಶುಕ್ರವಾರ ಸಾಯಂಕಾಲ 4-30 ಗಂಟೆಗೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ ಸಹಕರಿಸಬೇಕೆಂದೂ ಹಾಗೂ ಆ ದಿನ ಸಂಜೆ ಶ್ರೀ ದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕೆಂದು ವಿನಂತಿ.

- ಮಹಿಳಾ ವೇದಿಕೆಯ ಅಧ್ಯಕ್ಷರು ಮತ್ತು ಸಂಚಾಲಕರು

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ.)ದ ಆಶ್ರಯದಲ್ಲಿ

## ಸೌರ ಋಗುಪಾಕರ್ಮವು

**ತಾ.09-09-2011ರಂದು ಶುಕ್ರವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

- ಕಾರ್ಯದರ್ಶಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎಸ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ನಾನು ನಿತ್ಯದಂತೆ ಬರುವಾಗ ಎಂದೆಂದೂ ಆ ಮೈದಾನದಲ್ಲಿ ಪ್ರತಿದಿನ ಕ್ರಿಕೆಟ್ ಆಡುವ ಆ ಹುಡುಗರನ್ನು ಗಮನಿಸುತ್ತಿದ್ದೆ. ಅಂದು ಯಾಕೋ ನಾನು ಅಲ್ಲಿಯೇ ಇದ್ದ ಅಂಗಡಿ ಯಲ್ಲಿ ಏನನ್ನೋ ಕೊಳ್ಳಲು ನಿಂತಿದ್ದೆ. ಅಷ್ಟರಲ್ಲಿ ಮೈದಾನಕ್ಕೆ ನುಗ್ಗಿದ 2-3 ಕಾರುಗಳಿಂದ ಸುಮಾರು 18-20 ಜನ ದಾಂಡಿಗ ವ್ಯಕ್ತಿಗಳು ಇಳಿದು ಹುಡುಗರು ಆಡುತ್ತಿದ್ದ ಕ್ರಿಕೆಟ್ ಸ್ಟಂಪ್ ಗಳು, ಬ್ಯಾಟ್ ಮೊದಲಾದುವುಗಳನ್ನು ತಮ್ಮ ಕೈಗೆತ್ತಿ ಏನೇನೋ ಅವಾಚ್ಯ ಶಬ್ದಗಳಿಂದ ಗಟ್ಟಿಯಾಗಿ ಬೈಯುತ್ತಿದ್ದದ್ದು ನಮಗೆಲ್ಲಾ ಕೇಳಿಸಿತು. ಅಷ್ಟರಲ್ಲಿ ಅಲ್ಲಿಗೆ ಮಕ್ಕಳು-ದೊಡ್ಡವರು ಸುಮಾರು 80-90 ಜನ ಬಂದು ಸೇರಿದರು. ಅವರೆಲ್ಲರ ನಡುವೆ ಬಂದ ಹುಡುಗರು ಯಾರದ್ದೊ ಹೆಸರನ್ನು ಹೇಳುತ್ತ 'ಯಾರವನು! ಅವನನ್ನು ಒಮ್ಮೆ ತೋರಿಸಿ' ಎಂದು ಆಡುತ್ತಿದ್ದ ಹುಡುಗರನ್ನು ಗದರಿಸುತ್ತಿದ್ದರು.

ಅಲ್ಲಿ ಆಡುತ್ತಿದ್ದ ಹುಡುಗರಂತೂ ಅಲ್ಲಲ್ಲಿ ಚದುರಿದಂತೆ ತೋರಿತು. ಅಲ್ಲದೆ ಯಾರೊಬ್ಬರೂ ಈ ಬಂದವರನ್ನು ಪ್ರತಿಭಟಿಸಿ ಮಾತಾಡಲು ಸಿದ್ಧರಿಲ್ಲ.

ಅಷ್ಟರಲ್ಲಿ ಏನೋ ವಿಷಯ ತಿಳಿದಂತೆ ಆ ಬಂದ ಹುಡುಗರು ಅವರು ಹುಡುಕುತ್ತಿದ್ದ ಹುಡುಗನ ಮನೆಯತ್ತ ನಡೆದರು. ಅವರು ಹೋದ ದಾಟಿ ನೋಡಿ ಅಲ್ಲಿದ್ದ ಕೆಲವರು ಹೇಳುತ್ತಿದ್ದರು-"ಇವರಿಗೆ ಈಗ ಆ ಹುಡುಗ ಸಿಕ್ಕಿದರೆ ಅವನ ಕಥೆ ಮುಗಿದಂತೆಯೇ ಸರಿ" ಎಂದರು. ಮುಂದೆ ಏನಾಯಿತು ಎನ್ನುವುದಕ್ಕಿಂತ ಬದಲಾಗಿ ಈ ರೀತಿಯ ವರ್ತನೆ ಪ್ರಜಾಪ್ರಭುತ್ವದಲ್ಲಿ ಆಗಾಗ ನಡೆಯುತ್ತಿರುತ್ತದೆ. ಆದರೂ ನಾಗರೀಕರಾದವರು ಪ್ರಜ್ಞಾವಂತರಾಗಿದ್ದರೂ, ಇದನ್ನು ನೋಡದವರಂತೆ ಸುಮ್ಮನಿರುತ್ತಾರೆ. ಇದು ನಮ್ಮ ದೇಶದ ದುರಂತವಲ್ಲದೆ ಮತ್ತೇನು? ಈ ಬಗ್ಗೆ ಪ್ರಜ್ಞಾವಂತರು ಪ್ರತಿಭಟಿಸಿದಾಗಲೇ ಅಥವಾ ಅಲ್ಲಿಗೆ ಪೋಲೀಸರ ಪ್ರವೇಶವಾಗುವಂತೆ ಮಾಡಿದಾಗಲೇ ಇಂತವರ ಕಾಟಕ್ಕೆ ಕಡಿವಾಣ ಹಾಕಬಹುದು ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಮಾಯಾವತಿಯೂ ಅವನನ್ನು ಕಾಮದೃಷ್ಟಿಯಿಂದ ನೋಡಲಾರಂಭಿಸಿದಳು. ಆಗ ಪ್ರದ್ಯುಮ್ನನು ವಿಸ್ಮಯ ಪಡುತ್ತ ಕೇಳಿದನು, "ಅಮ್ಮ, ನೀನು ನನ್ನ ಸಾಕು ತಾಯಿ. ಮಗನಂತಿರುವ ನನ್ನನ್ನು ನೀನು ಕಾಮಿಸಬಹುದೇ?" ಆಗ ಮಾಯಾವತಿಯು ಅವನ ಸತ್ಯ ವೃತ್ತಾಂತವನ್ನು ತಿಳಿಸಿದಳು. ಶಂಬರಾಸುರನು ಮಹಾಮಾಯಾವಿಯಾದುದರಿಂದ ಅವನನ್ನು ಗೆಲ್ಲಲು ಮಾಯೆಯನ್ನು ನಾಶ ಮಾಡಬಲ್ಲ 'ಮಹಾಮಾಯಾ' ಎಂಬ ವಿದ್ಯೆಯನ್ನು ಪ್ರದ್ಯುಮ್ನನಿಗೆ ಉಪದೇಶಿಸಿದಳು. ಪ್ರದ್ಯುಮ್ನನು ಶಂಬರಾಸುರನ ಮುಂದೆ ಹೋಗಿ ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು. ಕ್ರೋಧೋನ್ಮತ್ತನಾದ ಶಂಬರಾಸುರನು ಗದೆಯನ್ನೆತ್ತಿ ಪ್ರದ್ಯುಮ್ನನ ಮೇಲೆ ಎಸೆದನು. ಪ್ರದ್ಯುಮ್ನನು ತನ್ನ ಗದೆಯಿಂದ ಅದನ್ನು ತುಂಡು ಮಾಡಿದನು. ಆಗ ಶಂಬರಾಸುರನು ಮಾಯಾಸುರನಿಂದ ಕಲಿತ ಮಾಯಾ ವಿದ್ಯೆಯನ್ನು ಪ್ರಯೋಗಿಸಿದನು. ಮಹಾಮಾಯೆಯ ಮೂಲಕ ಪ್ರದ್ಯುಮ್ನನು ಅವನ ಮಾಯೆಯನ್ನು ನಿರಸ್ತಗೊಳಿಸಿದನು. ನಿಷ್ಪ್ರಭನಾದ ಶಂಬರಾಸುರನ ಕತ್ತನ್ನು ಖಡ್ಗದಿಂದ ಕತ್ತರಿಸಿಬಿಟ್ಟನು. ಆಗ ದೇವತೆಗಳು ಹೂಮಳೆಗರೆದರು. ಮಾಯಾವತಿಯಾಗಿದ್ದ ರತಿ ತನ್ನ ಪತಿಯಾದ ಪ್ರದ್ಯುಮ್ನನನ್ನು ಆಕಾಶ ಮಾರ್ಗದಿಂದ ದ್ವಾರಕೆಗೆ ಕರೆದುಕೊಂಡು ಹೋದಳು. ಅವರು ಅಂತಃಪುರಕ್ಕೆ ಹೋದಾಗ ಪ್ರದ್ಯುಮ್ನನನ್ನು ನೋಡಿ ಅಲ್ಲಿದ್ದ ಸ್ತ್ರೀಯರು ಶ್ರೀಕೃಷ್ಣನೇ ಮತ್ತೆ ಯುವಕನಾಗಿ ಬಂದನೆಂದು ಭ್ರಮಿಸಿದರು. ಅವನನ್ನು ನೋಡಿ ರುಕ್ಮಿಣಿಗೆ ವಾತ್ಸಲ್ಯ ವುಕ್ಕಿತು. ಅವಳು ತನ್ನಲ್ಲೇ ಆಶ್ಚರ್ಯದಿಂದ ಯೋಚಿಸಿದಳು-ಈ ತರುಣ ಯಾರಿರಬಹುದು! ನೋಡಿದರೆ ಶ್ರೀಕೃಷ್ಣನಂತೆಯೇ ಇದ್ದಾನೆ. ನನ್ನ ಎಳೆಯ ಮಗುವೊಂದು ಕಳೆದುಹೋಗಿತ್ತು. ಅದೇ ಬೆಳೆದು ಯುವಕನಾಗಿ ಬಂದಿರಬಹುದೇ? ಹಾಗೇ ಇರಬಹುದೆಂದು ನನಗನಿಸುತ್ತದೆ. ಇಲ್ಲವಾದರೆ ನನಗೇಕೆ ಈ ಹುಡುಗನ ಮೇಲೆ ಮಮತೆ ಉಂಟಾಗಿದೆ?

ಅಷ್ಟರಲ್ಲಿ ಶ್ರೀಕೃಷ್ಣ ಪರಮಾತ್ಮನೂ, ವಸುದೇವ-ದೇವಕಿಯರೂ ಅಲ್ಲಿಗೆ ಬಂದರು. ಭಗವಂತನಿಗೆ ಎಲ್ಲ ತಿಳಿದಿದ್ದರೂ ಏನೂ ತಿಳಿಯದವನಂತೆ ಸುಮ್ಮನಿದ್ದನು. ಆಗ ಅಲ್ಲಿಗೆ ನಾರದರ ಆಗಮನವಾಯಿತು. ಅವರು ಪ್ರದ್ಯುಮ್ನನ ಸಕಲ ವೃತ್ತಾಂತಗಳನ್ನೂ ಎಲ್ಲರಿಗೂ ಅರುಹಿದರು. ಪ್ರದ್ಯುಮ್ನನು ಕಾಮನ ಅವತಾರ ಮತ್ತು ಕೃಷ್ಣ-ರುಕ್ಮಿಣಿಯರ ಮಗನೆಂಬುದನ್ನೂ, ಮಾಯಾವತಿಯು ರತಿಯ ಅವರತಾರವೆಂಬುದನ್ನೂ ತಿಳಿದು ಎಲ್ಲರಿಗೂ ಅಮಿತಾನಂದವಾಯಿತು. ಎಲ್ಲರೂ ಆ ದಂಪತಿಗಳನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಆಶೀರ್ವದಿಸಿದರು.

### ೧೫

ವೃಷ್ಣಿವಂಶದಲ್ಲೇ ಅನಮಿತ್ರನೆಂಬ ರಾಜನಿದ್ದನು. ಅವನ ಎರಡನೆಯ ಮಗ ನಿಮ್ನ ಎಂಬವನು. ನಿಮ್ನನಿಗೆ ಇಬ್ಬರು ಗಂಡು ಮಕ್ಕಳಾದರು. ಅವರ ಹೆಸರು ಸತ್ರಾಜಿತ ಮತ್ತು ಪ್ರಸೇನ. ಸತ್ರಾಜಿತನು ಸೂರ್ಯನನ್ನು ಕುರಿತು ಕಠಿನ ತಪಸ್ಸನ್ನಾಚರಿಸಿದನು. ಇದರಿಂದ ಭಗವಾನ್ ಸೂರ್ಯನು ಸಂತುಷ್ಟನಾಗಿ ಸತ್ರಾಜಿತನಿಗೆ ಸೂರ್ಯನಂತೆ ಪ್ರಕಾಶಮಾನವಾದ ಸ್ಯಮಂತಕ ಎಂಬ ಮಣಿಯನ್ನು ಉಡುಗೊರೆಯಾಗಿ ಕೊಟ್ಟನು. ಆ ಮಣಿ ಮಾತ್ರವಲ್ಲ, ಅದನ್ನು ಧರಿಸಿದವರೂ ಕೂಡಾ ಸೂರ್ಯನಂತೆ ಹೊಳೆಯುತ್ತಿದ್ದರು. ಮೈಲಿಗೆಯಾದವರು ಅದನ್ನು ಧರಿಸಿದರೆ ಧರಿಸಿದವರನ್ನೇ ಅದು ಕೊಲ್ಲುತ್ತಿತ್ತು. ಅದು ಪ್ರತಿದಿನ ಎಂಟು ತೂಕದಷ್ಟು ಚಿನ್ನವನ್ನು ಕೊಡುತ್ತಿತ್ತು. ಆ ಮಣಿ ಇರುವ ದೇಶದಲ್ಲಿ ದುರ್ಭಿಕ್ಷೆ, ಮಾರಿ, ಅರಿಷ್ಟ, ಸರ್ಪಭಯ, ಮನೋವ್ಯಾಧಿ, ದೈಹಿಕ ರೋಗ, ಮಾಟ ಮಂತ್ರಗಳು ಇರುವುದಿಲ್ಲ. ಹೀಗೆ ಸತ್ರಾಜಿತನನ್ನು ಅನುಗ್ರಹಿಸಿದ ಸೂರ್ಯನು ಅವನ ಮಿತ್ರನೂ ಆದನು.

ಒಮ್ಮೆ ಸತ್ರಾಜಿತನು ದ್ವಾರಕೆಗೆ ಬಂದನು. ಅವನು ಸ್ಯಮಂತಕ ಮಣಿಯನ್ನು ಧರಿಸಿದ್ದರಿಂದ ಅದರ ಮತ್ತು ಅವನ ಪ್ರಖರ ಪ್ರಕಾಶವನ್ನು ಜನರಿಗೆ ನೋಡಲಾಗಲಿಲ್ಲ. ಅದರಿಂದ ಸೂರ್ಯನೇ ಶ್ರೀಕೃಷ್ಣನನ್ನು ನೋಡಲು ಬಂದಿರಬೇಕೆಂದು ಊಹಿಸಿದರು. ಕೆಲವರು ಶ್ರೀಕೃಷ್ಣನಿಗೆ ಸೂರ್ಯನು ಬಂದ ವಿಷಯವನ್ನು ತಿಳಿಸಿದರು. ಶ್ಯಾಮಸುಂದರನು ನಕ್ಕು ಅದು ಸ್ಯಮಂತಕ ಮಣಿಯೆಂದೂ, ಧರಿಸಿದವನು ಸತ್ರಾಜಿತನೆಂದೂ ಹೇಳಿದನು. ಸತ್ರಾಜಿತನಿಗೆ ಅರಮನೆಯಲ್ಲಿ ಭವ್ಯ ಸ್ವಾಗತ ದೊರೆಯಿತು. ಅವನು ಬ್ರಾಹ್ಮಣರ ಮೂಲಕ ಆ ಮಣಿಯನ್ನು ಪೂಜಾ ಮಂದಿರದಲ್ಲಿರಿಸಿದನು. ಒಮ್ಮೆ ಭಗವಂತನು ಮಾತಾಡುತ್ತ ಆ ಮಣಿಯನ್ನು ಉಗ್ರಸೇನನಿಗೆ ಕೊಡುವಂತೆ ವಿನಂತಿಸಿದನು. ಆದರೆ ಮಹಾಲೋಭಿಯಾದ ಸತ್ರಾಜಿತನು ಕೃಷ್ಣನ ಬೇಡಿಕೆಯನ್ನು ತಿರಸ್ಕರಿಸಿದನು.

ಒಂದು ದಿನ ಸತ್ರಾಜಿತನ ತಮ್ಮನಾದ ಪ್ರಸೇನನು ಆ ಮಣಿಯನ್ನು ಧರಿಸಿಕೊಂಡು ಕುದುರೆಯೇರಿ ಬೇಟೆಗಾಗಿ ಕಾಡಿಗೆ ಹೋದನು. ಆದರೆ ಅಲ್ಲೊಂದು ಸಿಂಹವು ಅವನನ್ನು, ಅವನ ಕುದುರೆಯನ್ನೂ ಕೊಂದು ಆ ಮಣಿಯನ್ನು ಕಿತ್ತುಕೊಂಡು ಪರ್ವತದ ಕಡೆಗೆ ಓಡಿತು. ಆಗ ಜಾಂಬವಂತನು (ರಾಮಾಯಣದಲ್ಲಿ ಪ್ರಸಿದ್ಧನಾದವನು) ಆ ಮಣಿಗಾಗಿ ಸಿಂಹವನ್ನು ಕೊಂದು, ಅದನ್ನು ತನ್ನ ಗುಹೆಗೆ ತೆಗೆದುಕೊಂಡು ಹೋಗಿ ತನ್ನ ಮಗುವಿಗೆ ಆಟಿಕೆಯಾಗಿ ಕೊಟ್ಟನು.

ಇತ್ತ ಸತ್ರಾಜಿನು ಬೇಟೆಗೆ ಹೋದ ತಮ್ಮನನ್ನು ಮಣಿಯ ಆಸೆಯಿಂದ ಶ್ರೀಕೃಷ್ಣನೇ ಕೊಂದಿರಬಹುದೆಂದು ಅವರಿವರಲ್ಲಿ ಹೇಳಿದನು. ಅದು ಕರ್ಣಾಕರ್ಣಿಕೆಯಾಗಿ ಕೃಷ್ಣನ ಕಿವಿಗೂ ಬಿತ್ತು. ಅವನು ತನ್ನ ಮೇಲೆ ಬಂದಿರುವ ಅಪವಾದವನ್ನು ಹೋಗಲಾಡಿಸಬೇಕೆಂದು ನಿಶ್ಚಯಿಸಿ ಜನರನ್ನು ಕರೆದುಕೊಂಡು ಪ್ರಸೇನನನ್ನು ಹುಡುಕಲು ಕಾಡಿಗೆ ಹೋದನು. ಅಲ್ಲೊಂದು ಕಡೆ ಸತ್ತ ಪ್ರಸೇನನನ್ನು, ಸತ್ತ ಕುದುರೆಯನ್ನೂ, ಸ್ವಲ್ಪ ದೂರದಲ್ಲಿ ಸತ್ತ ಸಿಂಹವನ್ನೂ ನೋಡಿ ಜನರು ಕೃಷ್ಣನಿಗೆ ಸುದ್ದಿ ತಿಳಿಸಿದರು. ಕೂಡಲೇ ಶ್ರೀಕೃಷ್ಣನು ಅಲ್ಲಿಗೆ ಹೋಗಿ ಹೆಣಗಳನ್ನು, ಸಿಂಹದ ಕಡೆಯಿಂದ ಹೋದ ಕರಡಿಯ ಹೆಜ್ಜೆಯ ಜಾಡನ್ನೂ ನೋಡಿದನು. ಆ ಜಾಡನ್ನು ಅನುಸರಿಸಿ ಹೋದಾಗ ಅಲ್ಲೊಂದು ಗುಹೆ ಕಾಣಿಸಿತು. ಆ ಭಯಂಕರ ಗುಹೆಯೊಳಗೆ ಕುರುಡುಗತ್ತಲಿತ್ತು. ಶ್ರೀಕೃಷ್ಣನು ಜನರನ್ನು ಹೊರಗೆ ನಿಲ್ಲಿಸಿ ತಾನೊಬ್ಬನೇ ಗುಹೆಯೊಳಗೆ ಹೋದನು. ಅಲ್ಲಿ ಪ್ರಕಾಶಮಾನವಾದ ಮಣಿಯೊಡನೆ ಆಟವಾಡುತಿದ್ದ ಮಗುವನ್ನು ಕಂಡು ಆ ಮಣಿಯನ್ನು ತೆಗೆದುಕೊಳ್ಳಲು ಮಗುವಿನ ಹತ್ತಿರ ಹೋದನು. ಅಲ್ಲಿದ್ದ ಮಗುವಿನ ದಾದಿಯು ಈ ಅಪೂರ್ವ ಮನುಷ್ಯನನ್ನು ನೋಡಿ ಹೆದರಿ ಕೂಗಿಕೊಂಡಳು. ಅದನ್ನು ಕೇಳಿ ಬಲಿಷ್ಠನಾದ ಜಾಂಬವಂತನು ಸಿಟ್ಟಿನಿಂದ ಗುರುಗುಟ್ಟುತ್ತಾ ಅಲ್ಲಿಗೆ ಬಂದನು. ಅವನು ತನ್ನ ಸ್ವಾಮಿಯೇ ಬಂದಿರುವುದನ್ನು ತಿಳಿಯದೇ ಶ್ರೀಕೃಷ್ಣನನ್ನು ಸಾಮಾನ್ಯ ಮನುಷ್ಯನೆಂದು ಅಂದುಕೊಂಡು ಅವನೊಡನೆ ಹೋರಾಡಿದನು. ಅವರೊಳಗೆ ತುಮುಲ ಕಾಳಗ ಏರ್ಪಟ್ಟಿತು. ಆಯುಧ, ಕಲ್ಲು, ಮರ, ಬಾಹುಗಳಿಂದ ಪರಸ್ಪರ ಹೊಡೆದಾಡಿಕೊಂಡರು. ಹೀಗೆ 28 ದಿನಗಳ ವರೆಗೆ ಹಗಲಿರುಳು ಎಡೆಬಿಡದೇ ಯುದ್ಧ ನಡೆಯಿತು. ಅಷ್ಟರಲ್ಲಿ ಜಾಂಬವಂತನ ಅಂಗಾಂಗಗಳು ಹೊಡೆತಕ್ಕೆ ಶಿಥಿಲವಾಗಿ ಅವನ ಶಕ್ತಿಯುಡುಗಿತು. ಅವನು ಬಳಲಿ ಬೆವರಿದನು. ಅವನಿಗೆ ಆಶ್ಚರ್ಯವಾಯಿತು. ಅವನಿಗೆ ರಾಮಾವತಾರದ ನೆನಪಾಯಿತು. ಅವನೇ ಹೊಸ ಅವತಾರವೆತ್ತಿಬಂದಿರಬಹುದೆಂದು ಊಹಿಸಿದನು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಅಪ್ರಿಯಸ್ಯಾಪಿ ಪಥ್ಯಸ್ಯ ಪರಿಣಾಮಃ ಸುಖಾವಹಃ
ವಕ್ತಾ ಶ್ರೋತಾ ಚ ಯತ್ರಾಸ್ತಿ ರಮಂತೇ ತತ್ರ ಸಂಪದಃ ॥

ಅಂದರೆ ಪ್ರಿಯವಲ್ಲದಿದ್ದರೂ ಪಥ್ಯವಾದ ಮಾತಿನ ಪರಿಣಾಮ ಸುಖಕರವೇ ಆಗುವುದು. ಅಂಥ ಮಾತನ್ನು ಹೇಳುವವನೂ ಕೇಳುವವನೂ ಎಲ್ಲಿರುವನೋ ಅಲ್ಲಿ ಎಲ್ಲ ಸಂಪತ್ತುಗಳೂ ನಲಿಯುವುವು.

**ಪುಸ್ತಕ ಪರಿಚಯ :**

**ಅಪಶಬ್ದ ಕೋಶ**

*(ಕನ್ನಡದಲ್ಲಿ ಪ್ರಚಲಿತವಿರುವ ಅಪಶಬ್ದಗಳ ಸಾಧು ರೂಪಗಳು)*

*ಲೇಖಕರು :* ಕುರಯ ಆತ್ಮಾರಾಮ ಶಾಸ್ತ್ರಿ, ಬೆಂಗಳೂರು
*ಪ್ರಕಾಶನ :* ಗಾಯತ್ರಿ ಪ್ರಕಾಶನ, ಶ್ರೀನಿಲಯ, ಕಬ್ಬಿನಾಲೆ, ಕಾರ್ಕಳ.
*ಬೆಲೆ :* ರೂ.50/-

'ಅಪಶಬ್ದ ಕೋಶ' ಈ ಕೃತಿಯ ಪ್ರಕಾಶಕರು ಹೇಳುವಂತೆ - "ನಮ್ಮ ಗಾಯತ್ರಿ ಪ್ರಕಾಶನದ ಪ್ರಥಮ ಪುಷ್ಪವಾಗಿ 'ಅಪಶಬ್ದ ಕೋಶ'ವೆಂಬ ಈ ಪುಸ್ತಿಕೆ ಅರಳುತ್ತಿದೆ. ಇದನ್ನು ಬರೆದವರು ನಮ್ಮ ಪೂಜ್ಯ ಗುರುಗಳಾದ ಕುರಯ ಆತ್ಮಾರಾಮ ಶಾಸ್ತ್ರಿಗಳು. ಗುರುಗಳ ಹುಟ್ಟೂರು ದಕ್ಷಿಣ ಕನ್ನಡದ ಪುತ್ತೂರು. ಪ್ರಸಿದ್ಧ ವೈದಿಕ ಮನೆತನದಲ್ಲಿ ಜನನ. ಪ್ರಾಥಮಿಕ ಸಂಸ್ಕೃತವನ್ನು ಅಧ್ಯಯನ ಮಾಡಿದ್ದು, ಪ್ರಕಾಂಡ ಪಂಡಿತರಾದ ಶ್ರೀ ಕಡವ ಶಂಭು ಶರ್ಮರಲ್ಲಿ. ಅನಂತರ ಉಡುಪಿಯ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಶಿರೋಮಣಿಗಾಗಿ ಅಧ್ಯಯನ. ಬಳಿಕ ಮುಂಬೈಗೆ ಪಯಣ. ಅಲ್ಲಿ ಭಾರತೀಯ ವಿದ್ಯಾಭವನದಲ್ಲಿ ವಾಚಸ್ಪತಿ (Ph.D)ಗಾಗಿ ಸಂಶೋಧನೆ. ವಾಚಸ್ಪತಿಯೆನಿಸಿದ ಮೇಲೆ ಬೆಂಗಳೂರಿಗೆ ಆಗಮನ. ಅಲ್ಲಿ ಶಾಲೆಯೊಂದರಲ್ಲಿ ಸಂಸ್ಕೃತಾಧ್ಯಾಪನ. ಇದರ ಮಧ್ಯದಲ್ಲಿ ಕನ್ನಡದಲ್ಲಿ ಬಿ.ಎ., ಸಂಸ್ಕೃತದಲ್ಲಿ ಎಂ.ಎ., ನಿವೃತ್ತಿಯ ಬಳಿಕ ಸುಳ್ಯ ಅಜ್ಜಾವರದ ವೈದಿಕ ಪಾಠಶಾಲೆಯಲ್ಲಿ ಅಧ್ಯಾಪನ. ಹತ್ತು ವರ್ಷಗಳ ಸೇವೆಯ ಅನಂತರ ಪುನಃ ಬೆಂಗಳೂರು ವಾಸ.

ಗುರುಗಳು ಬರೆದ ಶ್ರೀಮದ್ಭಾಗವತದ 'ಶ್ರೀ ಕೃಷ್ಣಾಯನ' ಎಂಬ ಶ್ರೀ ಕೃಷ್ಣನ ಜೀವನ ಚರಿತೆಯು 'ವಿಕ್ರಮ' ವಾರಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗಿದೆ. ಹಾಗೇ ಅವರು ಅನುವಾದಿಸಿದ ಮಹಾಕವಿ ಕಾಳಿದಾಸನ 'ಮಾಲವಿಕಾಗ್ನಿಮಿತ್ರ'ವೆಂಬ ನಾಟಕವು ಪ್ರಕಾಶನಕ್ಕಾಗಿ ಕಾಯುತ್ತಿದೆ".

ಈ ಕೃತಿಯ ಲೇಖಕರಾದ ಕುರಯ ಆತ್ಮಾರಾಮ ಶಾಸ್ತ್ರಿ ಅವರು ಮುನ್ನುಡಿಯಲ್ಲಿ ಹೀಗೆ ತಿಳಿಸುತ್ತಾರೆ - "ನನ್ನೀ 'ಅಪಶಬ್ದ ಕೋಶ'ವೆಂಬ ಪುಸ್ತಿಕೆಯಲ್ಲಿ ಅಪಶಬ್ದಗಳನ್ನು, ಅಪಪ್ರಯೋಗಗಳನ್ನು ಸಂಗ್ರಹಿಸಿ ಅವುಗಳ ಸಾಧು ರೂಪಗಳನ್ನು ದಿಙ್ಮಾತ್ರ ಪ್ರದರ್ಶಿಸಿದ್ದೇನೆ. ಸರಿಯಾದ ಮಾರ್ಗದರ್ಶನವಿಲ್ಲದೆ ದಿಙ್ಮೂಢರಾಗಿರುವ ಅನೇಕ ಭಾಷಾಸಕ್ತರನ್ನು ನಾನು ಕಂಡಿದ್ದೇನೆ. ಅಂತಹವರ ಪ್ರಯೋಜನಕ್ಕಾಗಿ ಈ ಸಾಹಸಕ್ಕೆ ನಾನು ಕೈ ಹಾಕಿದ್ದೇನೆ. 'ನಾವು ಗೋಕರ್ಣದವರು, ನಮಗೆ ವ್ಯಾಕರಣ ತಲೆಗೆ ಹತ್ತುವುದಿಲ್ಲ' ಎನ್ನುವವರೂ ಇದ್ದಾರೆ. ಅಂತಹ ಮುಗ್ಧರ ಪ್ರಯೋಜನಕ್ಕಾಗಿ ತಪ್ಪು ಸರಿ ಶಬ್ದಗಳ ಪಟ್ಟಿಯನ್ನು ಮೊದಲೇ ಕೊಟ್ಟಿದ್ದೇನೆ. ಅವರು ವ್ಯಾಕರಣದ ಜಾಲದೊಳಗೆ ಪ್ರವೇಶಿಸದಿದ್ದರಾಯಿತು. ಒಟ್ಟಾರೆ ಆಸಕ್ತರು ತಪ್ಪುಗಳನ್ನು ತಿದ್ದುಕೊಂಡರೆ ನನ್ನೀ ಸಾಹಸ ಸಾರ್ಥಕ".

ಸುಮಾರು **160** ತಪ್ಪು ಸರಿ ಶಬ್ದಗಳ ಪಟ್ಟಿಯನ್ನು ಕೃತಿಯಲ್ಲಿ ನೀಡಿದ್ದಾರೆ. ಪ್ರತಿಯೊಂದರ ವಿವರವನ್ನು ಸ್ವಾರಸ್ಯಕರವಾಗಿ ನೀಡಲಾಗಿದೆ. ಉದಾಹರಣೆಗಾಗಿ

ತಪ್ಪು : ಉಪಹಾರ, ಸರಿ : ಉಪಾಹಾರ - ಈ ಎರಡೂ ಶಬ್ದಗಳೂ ಸರಿಯಾಗಿಯೇ ಇವೆ. ಸಮಸ್ಯೆ ಇರುವುದು ಇವುಗಳ ಪ್ರಯೋಗದಲ್ಲಿ. ಉಪಹಾರ ಮತ್ತು ಉಪಾಹಾರಗಳ ಅರ್ಥಗಳಲ್ಲಿ ವ್ಯತ್ಯಾಸವಿದೆ. ಉಪಹಾರವೆಂದರೆ ಉಡುಗೊರೆ (Gift) ಎಂದರ್ಥ. ಉಪಾಹಾರವೆಂದರೆ ಪ್ರಧಾನವಲ್ಲದ, ಸಣ್ಣ ಆಹಾರವೆಂದರ್ಥ. ಟಿಫಿನ್ ಎನ್ನುವುದೇ ಇದು. ಆದುದರಿಂದ ಉಪಾಹಾರ ಮಂದಿರಕ್ಕೆ ಉಪಹಾರ ಮಂದಿರವೆನ್ನುವುದು ತಪ್ಪು.

ಈ ಅಪಶಬ್ದಗಳು 'ಹೊಸದಿಂಗತ' ದಿನಪತ್ರಿಕೆಯಲ್ಲಿ ಶಬ್ದಾಂತರಂಗ ಎಂಬ ತಲೆಬರೆಹದಡಿಯಲ್ಲಿ ಧಾರಾವಾಹಿಯಾಗಿ ಹರಿದು ಬಂದಿವೆ.


ಕುರಯ ಆತ್ಮಾರಾಮ ಶಾಸ್ತ್ರಿಯವರ 'ಶ್ರೀಕೃಷ್ಣಾಯನ' ನಮ್ಮ ಶ್ರೀಶಾರದಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.


# “ತುಳುತ ಬೂಕು” ತುಲುನಾಡ್‌ದ ಮಾಮಲ್ಲ ಕವಿ ‘ನಂದೊಳಿಗೆ ಮುದ್ದಣೆ’

ರಡ್ಡ್ ಪಾತೆರ : ವೈ. ಮೋಹನ್‌ರಾವ್



“ಪೊಸಗನ್ನಡದ ಪುಲ್ಯ ಕಾಂಡೆದ ಕಿಲೆಪುದ ಕೋರಿ ಪಂಡ್ದ್ ಸಾಹಿತಿಲು, ವಿಮರ್ಶಕೆರ್ ತುಳುವ ಮುದ್ದಣನ್ ಪುಗರ್‌ದೆರ್. ಮುದ್ದಣೆ ಪನ್ಪಿ ಕಾವ್ಯನಾಮದ ನಂದಳಿಕೆ ಲಕ್ಷ್ಮಿನಾರಾಯಣೆ ಅಚ್ಚ ತುಳುವೆ. 1870ಡ್ ಪುಟ್ಟುದ್ 1901ಡ್ ತನ್ನ 31ನೇ ವರ್ಸೊಡೆ ತೀರ್ದ್ ಪೋಯಿನ ಈ ಮಹಾಕವಿ ತನ್ನ ಜೀವತಾವಧಿಡ್ ಸಾಹಿತ್ಯದ ಬುಳೆಚ್ಚಿಲ್‌ಗಾದ್ ಬೆಂದಿನ ಬೇಲೆ ಸಾಹಿತ್ಯ ಲೋಕೊಡೆ ದಾಖಲೆ. ‘ರಾಮಾಶ್ವಮೇಧಂ’, ‘ಕುಮಾರವಿಜಯ’, ‘ಶ್ರೀರಾಮಪಟ್ಟಾಭಿಷೇಕ’, ‘ಅದ್ಭುತ ರಾಮಾಯಣ’, ‘ರತ್ನಾವತಿ ಕಲ್ಯಾಣ’ ಇಂಚ ಕೆಲವು ಬೂಕುಲೆನ್ ಬರೆದ್ ಸಾರಸ್ವತ ಲೋಕೊಗ್ ಕೊರ್ತಿನ ಮುದ್ದಣೆ ಕನ್ನಡ ಸಾಹಿತ್ಯದ ಕಲಟ್ ಒಂಜಿ ಪೊಸ ಬುಲೆ ಬುಲೆಯಿನಾಯೆ. ಈ ಕವಿ ತುಳುತ ಬಗ್ಗೆಲ ದಿಂಜ ಅಭಿಮಾನ ಇತ್ತಿನಾಯೆ. ಶಬ್ದಾಲಂಕಾರ, ಉತ್ಪ್ರೇಕ್ಷಲಾಂಕಾರೊಲೆಗ್ ಎಚ್ಚ ಮಾನ್ಯತೆ ಕೊರ್ನ ಈ ಕವಿ ಈತ್ ಗ್ರಂಥಲೊನ್ ಮಾತ್ರ ಅತ್ತ್ ದಿಂಜ ಸಾಂಪ್ರದಾಯಿಕ ಗೀತೆಲೆನ್ಲಾ ಬರೆತೆಗೆ. ಆಯೆ ಬರೆಯಿನ ಜೋ ಜೋ ಪನ್ಪಿನ ಬರವು ನನಲಾ ಸೋಧನೆ ಆತಿಜಿ. ಜೋಗುಳ ಪನ್ಪಿನ ಪದ ಜೋಕುಲು ಪನ್ಪಿನ ತುಳು ಪದೊಡ್‌ದೆ ಉಂಡಾಂಡ್‌ದಂದ್ ಆಯೆನ ಅಭಿಪ್ರಾಯ. ತನ್ನ ಪ್ರತಿ ಕನ್ನಡ ಗ್ರಂಥೊಡ್ಲ ದಿಂಜ ತುಳು ಪದಕುಲೆನ್ ಗಳಸಾವೊಂದೆ. ನೇನ್ ಪೆಜಿದ್ ಒಂಜಿ ಕೋಪೆ ಮಲ್ತ್‌ಂಡ ಅವುಲಾ ಒಂಜಿ ಗ್ರಂಥೊನೆ ಆವು. ಆಯೆನ ಪ್ರತಿ ಗ್ರಂಥೊಡ್ಲ ತುಳು ಸಂಸ್ಕೃತಿದ ನಿರೆಲ್ ತೋಜಿದ್ ಬರ್ಪುಂಡ್.

ಇಂಜಿನ ಮಹಾಕವಿ ತುಳುವೆ ಮುದ್ದಣನ ಬಗೆಟ್ ನಂದಳಿಕೆ ಬಾಲಚಂದ್ರರಾವ್ ಈ ಬೂಕುನ್ ಬರೆತೆರ್. ಮುದ್ದಣ ಸ್ಮಾರಣ ಮಿತ್ರ ಮಂಡಳಿದ ಗುರ್ಕಾರ್ರ್ ಆದ್ ಮುದ್ದಣ ಪ್ರಕಾಶನದ ಗೌರವ ನಿರ್ದೇಶಕೆರಾದ್ ನಂದಳಿಕೆಡ್ ಮುದ್ದಣನ ಬಗೆಟ್ ಮಲ್ಲ ಒಂಜಿ ಲೇಸ್ ನಡಪಾಯಿನ ಕೀರ್ತಿ ಪಡೆಯಿನಾರ್ ಬಾಲಚಂದ್ರ ರಾವ್ ಕರ್ನಾಟಕ ಬ್ಯಾಂಕ್‌ದ ಅಧಿಕಾರಿಯಾದ್ ಸಾಹಿತ್ಯೊದ ಕಲಟೊಂಜಿ ಬೆನ್ಪುನ ನರಮಾನಿಯಾದ್ ಪುದರ್ ಪಡೆಯಿನಾರ್. ಅಮೇರಿಕದ ಬಾಲ್ಟಿಮೋರ್ ಪನ್ಪಿನಲ್ಪ 2006ಡ್ ನಡತ್ತಿನ ಅಕ್ಕ ಕನ್ನಡ ವಿಶ್ವ ಸಮ್ಮೇಳನೊಡ್ ಮುದ್ದಣನ್ ಗ್ರಂಥೊಲೆನ್ ಬೊಲ್ಪುಗ್ ಕನತ್ತ್‌ದ್ ಮುದ್ದಣನ ಕೀರ್ತಿನ್ ಲೋಕೊಡೊರ್ಮೆ ಪಸರುಲೆಕ ಮಲ್ತಿನಾರ್. ಮುದ್ದಣನ ಬಗೆಟ್ ದಿಂಜ ಪುಸ್ತಕೊಲು ಕನ್ನಡಡ್ ಬತ್ತ್‌ದ್‌ಂಡ್ ಅಂಡ ಪುಂದು ಆಯೆನ ಬಗೆಟ್ ಬತ್ತಿನ ತುಳುತ ಸುರತ ಗ್ರಂಥ. ಗ್ರಂಥಕರ್ತೆಗ್ ತುಳು ಸಾಹಿತ್ಯ ಅಕಾಡೆಮಿದ ಸೊಲ್ಮೆಲು. ಅಂಚೆನೆ ಬೂಕುನ್ ಅತ್ಯಲ್ಪ ಕಾಲೊಡ್ ಪೊರ್ಲುದ ಪೊಲಿಗೆಡ್ ಅಚ್ಚಿ ಮಲ್ತ್ ಕೊರಿನ ಆಕೃತಿ ಪ್ರಿಂಟ್ಸ್‌ದ ಶ್ರೀ ಕಲ್ಲೂರು ನಾಗೇಶ್ ಬೊಕ್ಕ ಬಲಗದಕ್ಲೆಗ್ ಋಣಿಯಾದುಲ್ಲೆ” ಉಂದು ಈ ಬೂಕುಡು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ರಿಜಿಸ್ಟ್ರಾರರ್ ಆಯಿನ ಡಾ। ಪಾಲ್ತಾಡಿ ರಾಮಕೃಷ್ಣ ಆಚಾರ್ ಮೆರೆನ ‘ಗುರ್ಕಾರೆನ ಮದಿಪು’.



“ನಂದಳಿಕೆ ಬಾಲಚಂದ್ರರಾವ್ ಕವಿ ಮುದ್ದಣೆ ಪುಟ್ಟಿನ ನಂದೊಳಿಗೆದಾರ್. ಕುಡ್ಲ ಕರ್ಣಾಟಕ ಬ್ಯಾಂಕ್‌ದ ಪ್ರಾದೇಶಿಕ ಕಚೇರಿದ ಅಧಿಕಾರಿ ಆದುಲ್ಲೆರ್. 1979ಡ್ ಮುದ್ದಣ ಸ್ಮಾರಕ ಮಿತ್ರ ಮಂಡಳಿ ತಾಪನೆ ಮಲ್ತ್‌ದ್ ಇತ್ತೆಲಾ ಐತ ಗೌರವ ಗುರ್ಕಾರ್ರಾದುಲ್ಲೆರ್. 1987ಡ್ ಪೊರ್ಲುದ ‘ಮುದ್ದಣ ಸ್ಮಾರಕ ಸಭಾಭವನೊ’ನು ಕಟ್‌ದ್ ಉಂತಾಯೆರ್. 1995ಡ್ ಮುದ್ದಣ ಪ್ರಕಾಶನ ಸಂಸ್ಥೆನ್ ಉಂಡು ಮಲ್ತ್‌ದ್ ಆ ಮುಕಾಂತ್ರ ‘ಮುದ್ದಣ ಪುರಸ್ಕಾರ ವಿದ್ವಾನ್ ಸಮ್ಮಾನೊ’ನು ಪ್ರತಿ ವರ್ಸೊ ಕೊರೊಂದುಲ್ಲೆರ್.

ಕವಿ ಮುದ್ದಣನ ಸಮಗ್ರ ಗ್ರಂಥ ಪುನರ್ ಮುದ್ರಣ, ಯಕ್ಷಗಾನ- ಕಾವ್ಯವಾಚನ-ವ್ಯಾಖ್ಯಾನ ಸಿಡಿ ನಿರ್ಮಾಣ, 2006ಡ್ ಅಮೇರಿಕೊಡು ನಡತಿನ ‘ಅಕ್ಕ’ ವಿಶ್ವ ಕನ್ನಡ ಸಮ್ಮೇಳನೊಡು ಶ್ರೀ ರಾಮಾಶ್ವಮೇಧ ಲೋಕಾರ್ಪಣೆ ಇಂಚಿತ್ತಿ ಮಾತ ಏತೋ ಸಾಧನೆ ಮಲ್ತಿನಾರ್ ನಂದಳಿಕೆ.

ಬಾಲಚಂದ್ರ ರಾಯೆರ್ನ ಪಾದರಸ ವ್ಯಕ್ತಿತ್ವೊ ಮುದ್ದಣ ಸ್ಮಾರಕ ಸಮಿತಿ ಮಾತ್ರ ಅತ್ತ್‌ಂದೆ ದೂರವಾಣಿ ಸಲಹಾ ಸಮಿತಿ, ಸುಬ್ರಹ್ಮಣ್ಯ ಸಭಾ ಮಂಗಳೂರು, ಕಾಂತಾವರ ಕನ್ನಡ ಸಂಘ, ವರ್ಧಮಾನ ಪ್ರಶಸ್ತಿ ಪೀಠ ಇಂಚ ಬೇತೆ ಬೇತೆ ಮರ್ಗಿಲ್‌ಡ್ ಆರ್ ಬೆನೊಂದುಲ್ಲೆರ್.

ಕವಿ ಮುದ್ದಣ ಸ್ಮಾರಕ ರಚನೆಗಾದ್ ಡಾ। ಶಿವರಾಮ ಕಾರಂತೆರೆಡ್ದ್ ಪುಟ್ಟೂರ ಸಂಮಾನ, ಉದಯವಾಣಿ ವಿಂಶತಿ ಪ್ರಶಸ್ತಿ, ಸಂದೇಶ ರಾಜ್ಯ ಪ್ರಶಸ್ತಿ, ಮುದ್ದಣ 125 ಸಂಸ್ಮರಣೆ, ಉಡುಪಿಡ್ ಕು.ಶಿ. ಹರಿದಾಸ ಭಟ್ರೆಡ್ದ್ ಸಂಮಾನ-ಇಂಚ ಪಾಕ ತಮ್ಮನ-ಬಲ್ಮನ ಆರೆಗ್ ಒದಗ್‌ದ್ ಬೈದ್‌ಂಡ್” ಇಂಚಂದ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಸದಸ್ಯೆರಾಯಿನ ಭಾಸ್ಕರ ರೈ ಕುಕ್ಕುವಳ್ಳಿ ಮೇರ್ ಈ ಗ್ರಂಥೊದ ಬಗ್ಗೆ ‘ಎಡ್ಡೆಪುದ ಪಾತೆರೆ’ ಪಣ್ತೆರ್.

“ತುಳುನಾಡ್ ಮಾಮಲ್ಲ ಕಲೆ-ಕಾರ್ನಿಕೊದ ಬೂಡು. ಬುಳೆ-ಸಲೆ, ಕಂಜಿ-ಕೈಕಂಜಿ, ಶಕ್ತಿ-ಸಾಮರ್ಥ್ಯೊಗು ಉಂದು ಅಪ್ಪೆ ಇಲ್ಲ್. ಮುಲ್ಪ ಅವ್ವೇತೋ ವ್ಯಕ್ತಿಲು ಪುಟುದು ತನ್‌ಕ್ಲೆ ಸಾಧನೆಟ್ ತುಳುವಪ್ಪೆನ ಕೀರ್ತಿ ಬಾವುಟೊನು ದೇಶ-ವಿದೇಶೊಡು ಪಸರ್‌ದೆರ್. ಜೀವನೊದ ನಾನಾ ಮರ್ಗಿಲ್‌ಡ್ ಸೊಂದುದು ಬಿರ್ಸಾದಿಗೆ ಮೆರೆ ಪಾಯಿ ಅಂಚಿ ನರಮಾನ್ಯೆರೆಡ್ದ್ ತುಳು ಸೀಮೆದ ದುನ್ಹೊ-ಬಣ್ಣೊ ಎಚ್ಚಾದ್‌ಂಡ್. ತುಳು ಮಣ್ಣ್‌ಡ್ ಪುಟುದು, ಕನ್ನಡ ಸಾಹಿತ್ಯ ಲೋಕೊಡು ಮೆನ್ಕ್‌ದ್ ಸಂಸ್ಕೃತಿ ಪ್ರಿಯೆರ್ನ ಉಡಲ್‌ಡ್ ನಿಚ್ಚ ತುಡರಾದ್ ಬೆಳಗೊಂದುಪ್ಪುನ ನಂದೊಳಿಗೆದ ಮುದ್ದಣ ಕವಿ ಈ ಸಾಲ್‌ಡ್ ನೆಗತ್ ತೋಜುನ ಒರಿ ಪೆರಿಯ ಸಾಧಕೆ.

ಮುದ್ದಣೆ ಬಡಪತ್ತ್‌ಡ್ ಪುಟುದು ನಂದೊಳ್ಗೆದ ಹಳ್ಳಿ ಪ್ರದೇಶೊಡು ಬುಳೆದ್, ಅಪ್ಪೆ ನಾಡ್‌ದ ಪೆರ್ಮೆನ್ ನಾಲೊರ್ಮೆ ಗಮೆಸಾಯಿನ ಕವಿ. ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮಾಶ್ವ ಮೇಧಂ, ಅದ್ಭುತ ರಾಮಾಯಣ, ರತ್ನಾವತಿ ಕಲ್ಯಾಣ, ಕುಮಾರ ವಿಜಯ ಇಂಚಿತ್ತಿ ಸಾಹಿತ್ಯ ರಚನೆ ಮಲ್ತ್‌ದ್ ತನ್ನ ಮುಪ್ಪತ್ತೊಂಜನೇ ವರ್ಸ ಪ್ರಾಯೊಡು ಈ ಲೋಕೊನು ಬುಡ್ದುಪೋಯಿನ ಮಹಾತ್ಮೆ.

ನಂದಳಿಕೆ ಲಕ್ಷ್ಮೀನಾರಾಯಣಯ್ಯೆ ‘ಕವಿ ಮುದ್ದಣೆ’ ಆದ್ ಲೋಕ ಪುಗಾರ್ತೆ ಪಡೆತಿನ ಅಂದ್‌ಂದಾಂಡಲಾ ಆಯನ ಪುದರ್ ಒರಿಪಾವರೆ ಬೋಡಿತ್ತಿನ ಕಜ್ಜ ಆತಿನಿ ಕಮ್ಮಿಂದೇ ಪನೊಡು. ಎಂಕ್ಲೆನ ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ ಬೊಕ್ಕ ಮುದ್ದಣ ಪ್ರಕಾಶನ, ಮುದ್ದಣ ಅಧ್ಯಯನ ಕೇಂದ್ರ ಈ ನಿಲೆಟ್ ಎಲ್ಲೆಲ್ಯ ಚನಿಲ್ ಚಾಕ್ರಿ ಮಲ್ತೊಂದೇ ಉಂಡು. ಮುದ್ದಣೆ ಪುಟಿನ ಊರುಡು ಪುಟ್ಟಿನಾಯೆ ಪನ್ಪಿ ಪೆರ್ಮೆ ಎನ್ನವು. ಅಂಚಾದೇ ಆ ಮಹಾಕವಿನ ಬಗೆಟ್ ತುಳುಟೊಂಜಿ ಎಲ್ಯ ಬೂಕು ಬರೆಯೆರೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಎಂಕ ಅವಕಾಶ ಕೊರ್ತುಂಡ್. ನೆಕ್ಕ್ ಕಾರಣೆರಾಯಿನ ಅಕಾಡೆಮಿದ ಗುರ್ಕಾರ್ ಡಾ। ಪಾಲ್ತಾಡಿ ರಾಮಕೃಷ್ಣ ಆಚಾರ್ರೆಗ್, ಸರ್ವ ಸದಸ್ಯೆರೆಗ್ ಬೊಕ್ಕ ರಿಜಿಸ್ಟ್ರಾರ್ ಶ್ರೀ ಬಿ.ಚಂದ್ರಹಾಸ ರೈಕ್ಲೆಗ್ ಯಾನ್ ಸೊಲ್ಮೆ ಸಂದಾವೆ” ಉಂದ್ ಈ ಬೂಕುನ್ ತುಳುಟು ಬಿರ್ಸಾದಿಗೆಡ್ ಬರೆಯಿನ ನಂದಳಿಕೆ ಬಾಲಚಂದ್ರರಾಯೆರ್ನ ‘ಸುರುತ ಪಾತೆರ’.

ಸಂಶಯ ಇಜ್ಜಿ, ನಂದೊಳಿಗೆ ಮುದ್ದಣೆ ತುಳುನಾಡ್‌ದ ಮಾಮಲ್ಲ ಕವಿ. ‘ಮುದ್ದಣೆ ಮನೋರಮೆ’ ಪನ್ಪಿ ಕಂಡನೆ ಬುಡೆತಿನ ಸರೊಸದ ಸರಕ್ ನಮ್ಮೊ ನಾಲಾಯಿದ ಮಿತ್ತ್ ನಲಿಪುಂಡ್ ಅಂದ್. ಈ ಕವಿ ತುಳುತ ಬಗ್ಗೆಲ ದಿಂಜ ಅಭಿಮಾನ ಇತ್ತಿನಾಯೆ. ಈ ಬೂಕುಡ್ ಪಂಡಿನ ಲೆಕ್ಕ-“ಮುದ್ದಣನ ಕನ್ನಡ ಕಾವ್ಯೊಲೆಡ್ ಮಸ್ತ್ ಕಡೆ ತುಳು ಶಬ್ದೊಲು ತಿಕ್ಕುನವು ತುಳುನಾಡ್‌ದ ಮಣ್ಣ್‌ದ ಗುಣ”. ಆಂಡ ಆಯನ ಬಗ್ಗೆ ಬರೆಯಿನ ಉಂದ್ ತುಳುತ ಸುರತ ಗ್ರಂಥ. ಕವಿ ಮುದ್ದಣೆ ಪುಟ್ಟಿನ ನಂದಳಿಗೆಡ್ ಪುಟ್ಟಿನ ಈ ನಂದಳಿಕೆ ಬಾಲಚಂದ್ರರಾಯರ್ ಮಸ್ತ್ ಪ್ರೀತಿ ದೀದ್ ದಿಂಜ ಅಭಿಮಾನ ದೀದ್ ಈ ಗ್ರಂಥ ಬರೆತೆರ್. ಮುದ್ದಣನ ಕೀರ್ತಿನ್ ಲೋಕೊಡೊರ್ಮೆ ಪಸರುಲೆಕ, ‘ಅಯ್ಯಯ್ಯ ಎಂಚ ಪೊರ್ಲುಂಡ್’ ಅಂದ್ ಪಣ್ಣಿನಲ್ಕ ಬೊಕ್ಕ ತುಳು ಸಾಹಿತ್ಯೊಗ್ ಒಂಜಿ ಎಡ್ಡೆ ಪೊಸ ಕೊಡುಗೆ ಕೊರ್ತೆರ್. ಅಂಚಾದ್ ಅರೆಗ್ ಎನ್ನ ಮಾಮಲ್ಲ ಸೊಲ್ಮೆಲು.

## ಕು। ಪ್ರೀತಿಕಾ ಹರ್ಷಕುಮಾರ್‌ಗೆ ಸುಮಸೌರಭ ಪ್ರಶಸ್ತಿ



ಮಂಗಳೂರಿನ ಪುರಭವನದಲ್ಲಿ ಇತ್ತೀಚೆಗೆ ಜರಗಿದ “ಸುಮಸೌರಭ” ಪತ್ರಿಕೆಯ 19ನೇ ವರ್ಷದ ಸಾಂಸ್ಕೃತಿಕ ಸಂಭ್ರಮ ಹಾಗೂ “ಸೌರಭ ಪ್ರಶಸ್ತಿ” ಪ್ರಧಾನ ಸಮಾರಂಭವು ಪ್ರೊ। ಟಿ.ಸಿ.ಶಿವಶಂಕರ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಸಂಪನ್ನಗೊಂಡು ಕಟೀಲು ವೇದಮೂರ್ತಿ ಶ್ರೀ ಕೆ. ಲಕ್ಷ್ಮೀನಾರಾಯಣ ಅಸ್ರಣ್ಣ ಅವರ ಶುಭಾಶಂಸನೆಯೊಂದಿಗೆ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಹಾಗೂ ಗಣ್ಯಾತಿಗಣ್ಯರ ಉಪಸ್ಥಿತಿಯಲ್ಲಿ “ನೃತ್ಯಕ್ಷೇತ್ರ”ಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ “ಸುಮಸೌರಭ” ಪತ್ರಿಕೆಯು ರಾಜ್ಯಮಟ್ಟದಲ್ಲಿ ಕೊಡಮಾಡುವ 2010ನೇ ಸಾಲಿನ “ಸೌರಭ ಯುವ ಪ್ರಶಸ್ತಿ”ಯನ್ನು ಕು। ಪ್ರೀತಿಕಾ ಹರ್ಷಕುಮಾರ್‌ರವರು ಇಷ್ಟು ಎಳವೆಯಲ್ಲೇ ನೃತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ, ಬೆಳ್ಳಿ ಪದಕದೊಂದಿಗೆ ಶಾಲು ಹೊದೆಸಿ ಫಲಕ ನೀಡಿ ಫಲಪುಷ್ಪಗಳೊಂದಿಗೆ ಅವರನ್ನು ಪುರಸ್ಕರಿಸಲಾಯಿತು.

ವರದಿ : ಶ್ರೀಮತಿ ಕನಕವಲ್ಲಿ ಹರ್ಷಕುಮಾರ್

## ಚಾತುರ್ಮಾಸದಲ್ಲಿ ಗುರುಗಳ ಭೇಟಿ

ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದರ್ಶನ ಪಡೆಯಲು ಈ ವರ್ಷ ಚಾತುರ್ಮಾಸದ ಅವಧಿಯಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ಆಶೀರ್ವಾದ ಪಡೆಯಲು ಉದ್ದೇಶಿಸಲಾಗಿದೆ. ಕಳೆದ 26 ವರ್ಷಗಳಿಂದ ಸಮಾಜಬಾಂಧವರು ಒಂದುಗೂಡಿ ಗುರುಗಳ ಭೇಟಿಗಾಗಿ ಹೋಗುತ್ತಿದ್ದೇವೆ.

ಶ್ರೀ ಗುರುಗಳು ಈ ಹಿಂದೆ ನೀಡಿದ ಆದೇಶದಂತೆ ಈ ವರ್ಷ ತಾ.28-08-2011ರಂದು ಶ್ರೀ ಗುರುಗಳ ಆಶೀರ್ವಾದಕ್ಕಾಗಿ ತೆರಳುವುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ನಿರ್ಧರಿಸಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಬೇಕೆಂದು ಅಪೇಕ್ಷಿಸಲಾಗಿದೆ. ಆಸಕ್ತರು ಶಾರದಾ ಮಂಟಪದ ಮೆನೇಜರ್ (0820-2520754), ಕಾರ್ಯದರ್ಶಿ ಬಿ. ಕೃಷ್ಣಮೂರ್ತಿ ರಾವ್ (9663049590), ಜತೆ ಕಾರ್ಯದರ್ಶಿ ಮಂಜುನಾಥ ಹೆಬ್ಬಾರ್ (9611099894) ಇವರಲ್ಲಿ ರೂ.250/-ನ್ನು ನೀಡಿ ತಾ.20-08-2011ರೊಳಗೆ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ. ಆಸಕ್ತರು ಹೊರೆಕಾಣಿಕೆಯನ್ನು ಸಲ್ಲಿಸಬಹುದು.

PRAMOD
AUTOMOBILES
KARANGALPADY, MANGALORE -575 003.
30 Years of Service
Ph : 2493633 (0)
2493633 (H.O.)
2212723 (R)
Mobile : 9448260225
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR

# ದೇಶದ ರಕ್ಷಣಾ ಕ್ಷೇತ್ರದಲ್ಲಿ ಸಹೋದರರ ಅಪೂರ್ವ ಸಾಧನೆ



ಸುದರ್ಶನ್ ರಾವ್



ಸುಹಾಸ್ ರಾವ್

ಸುದರ್ಶನ್ ರಾವ್ ಇವರು ಬೆಂಗಳೂರಿನ ಡಾ| ಅಂಬೇಡ್ಕರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಬಿ.ಇ. (E&E) ಪದವಿ ಗಳಿಸಿದ್ದಾರೆ. ನೇವಲ್ ಅಕಾಡೆಮಿ, ಮಾಂಡೋವಿ ಗೋವ ಇಲ್ಲಿ ತರಬೇತಿಯನ್ನು ಪಡೆದಿದ್ದಾರೆ. ಇಂಡಿಯನ್ ನೇವಿ ಎಕ್ಸಿಕ್ಯೂಟಿವ್ ಬ್ರಾಂಚ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟ್ (SLT) ಹುದ್ದೆ ಪಡೆದು ವಿಶಾಖಪಟ್ನಂ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸುದರ್ಶನ್‌ರಾವ್ ಇವರ ತಮ್ಮ ಸುಹಾಸ ರಾವ್ ರಾಷ್ಟ್ರೀಯ ರಕ್ಷಾ ಅಕಾಡೆಮಿ (NDA) ಪುಣೆ ಸಂಸ್ಥೆಯಿಂದ ಬಿಎಸ್ಸಿ ಪದವಿ ಗಳಿಸಿರುತ್ತಾರೆ. ಭಾರತೀಯ ಸೈನ್ಯ ಅಕಾಡೆಮ (IMA) ಡೆಹ್ರಾಡೂನ್ ಇಲ್ಲಿ ಒಂದೂವರೆ ವರ್ಷದ ತರಬೇತು ಪಡೆದಿದ್ದಾರೆ. ಇವರು ಆರ್ಮಿ (10 SIKHLI)ನಲ್ಲಿ ಲೆಫ್ಟಿನೆಂಟ್ ಹುದ್ದೆ ಪಡೆದಿದ್ದು ಈಗ ಕಾಶ್ಮೀರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸುದರ್ಶನ್ ರಾವ್ ಮತ್ತು ಸುಹಾಸ್ ರಾವ್ ಇವರ ತಂದೆ ಕೇದಿಗೆ ರಾಜಗೋಪಾಲ್. (ಕೇದಿಗೆ ರಾಜಗೋಪಾಲ್ ಇವರ ತಂದೆ ಬಿ.ಕೆ. ಲಕ್ಷ್ಮೀನಾರಾಯಣ ರಾವ್ ಕೆಳಗಿನ ಕೇದಿಗೆ.) 1972ರ ಜನವರಿಯಿಂದ 1987 ಜನವರಿ 31ರ ವರೆಗೆ ಕಾರ್ಪ್ಸ್ ಆಫ್ ಸಿಗ್ನಲ್ಸ್ ಇಂಡಿಯನ್ ಆರ್ಮಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ನ್ಯೂಕ್ಲಿಯರ್ ಪವರ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್, ಕೈಗಾದಲ್ಲಿ ವಯರ್‌ಲೆಸ್ ಅಪರೇಟರ್ ಆಗಿ 1989ರಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಕೇದಿಗೆ ರಾಜಗೋಪಾಲ್‌ರವರ ಪತ್ನಿ ಶ್ರೀಮತಿ ಪ್ರಸನ್ನಕುಮಾರಿ. (ಶ್ರೀಮತಿ ಪ್ರಸನ್ನಕುಮಾರಿ ಇವರ ತಂದೆ ಕೊಕ್ರಾಡಿ ಶ್ಯಾಮರಾವ್.) 1981ರಿಂದ 2010ರ ವರೆಗೆ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಹೊಂದಿರುತ್ತಾರೆ. ಇವರ ಅಣ್ಣ ಕೊಕ್ರಾಡಿ ಸುರೇಶ ರಾವ್ ನಮ್ಮ ಸಂಘದ ಸಕ್ರಿಯ ಸದಸ್ಯರು. ಇವರು 23 ವರ್ಷ ಬಾರ್ಡರ್ ಸೆಕ್ಯೂರಿಟಿ ಫೋರ್ಸಿನಲ್ಲಿ ಸೇವಾ ಕಾರ್ಯನಿರ್ವಹಿಸಿ ಸ್ವಯಂ ನಿವೃತ್ತಿ ಹೊಂದಿರುತ್ತಾರೆ.

ಕೇದಿಗೆ ರಾಜಗೋಪಾಲ್ ಇವರ ಇಬ್ಬರು ಪುತ್ರರೂ ಮತ್ತು ಕುಟುಂಬದ ಸದಸ್ಯರೂ ದೇಶದ ರಕ್ಷಣೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದು ಅಪರೂಪದ ಸಂಗತಿ. ನಮ್ಮ ಸಮಾಜದಲ್ಲಿ ಈ ರೀತಿಯ ಸಂದರ್ಭವೂ ಅಪರೂಪವೇ. ಇಂಜಿನಿಯರ್ ಅಥವಾ ಡಾಕ್ಟರ್ ಆಗಿ ಆಕರ್ಷಕ ವೇತನವನ್ನು ನೀಡುವ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯ ಇಂದಿನ ವಾತಾವರಣದಲ್ಲಿ ಇಂಜಿನಿಯರ್ ಆಗಿದ್ದೂ ಸುದರ್ಶನರಾವ್ ಹಾಗೂ ಪದವೀಧರರಾಗಿದ್ದೂ ಸುಹಾಸ್‌ರಾವ್ ದೇಶದ ರಕ್ಷಣೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ದೇಶಭಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ಇವರದ್ದು ನಿಜವಾಗಿಯೂ ದೇಶಸೇವೆ-ಈಶ ಸೇವೆಯೇ ಸರಿ. ದೇಶದ ರಕ್ಷಣೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸುದರ್ಶನ್ ರಾವ್ ಮತ್ತು ಸುಹಾಸ್‌ರಾವ್ ಸಹೋದರರಿಗೆ ಮತ್ತು ಅವರ ಕುಟುಂಬದವರಿಗೆ ಶ್ರೀಶಾರದಾ ಶುಭ ಹಾರೈಸುತ್ತದೆ.

# ಮೂಡಬಿದಿರೆ : 'ಅಪಶಬ್ದಕೋಶ' ಪುಸ್ತಕ ಬಿಡುಗಡೆ

ಜೂನ್ ತಿಂಗಳ 17ನೆಯ ತಾರೀಕಿನಂದು ಮೂಡುಬಿದಿರೆಯ ಸಮುದಾಯ ಭವನದ ಸಣ್ಣ ಚಾವಡಿಯಲ್ಲಿ ಕುರಯ ಆತ್ಮಾರಾಮ ಶಾಸ್ತ್ರಿಗಳ 'ಅಪಶಬ್ದ ಕೋಶ' ಎಂಬ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಜರುಗಿತು. ಮೂಡುಬಿದಿರೆಯ ಪ್ರಿಂಟರ್ಸ್ ಅಸೋಸಿಯೇಶನ್ ಈ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಈ ಸರಳ ಸಮಾರಂಭದ ಅಧ್ಯಕ್ಷತೆಯನ್ನು ಅಸೋಸಿಯೇಶನ್ನಿನ ಅಧ್ಯಕ್ಷರು ವಹಿಸಿದ್ದರು. ಪುಸ್ತಕ ಬಿಡುಗಡೆಯನ್ನು ಧವಳ ಕಾಲೇಜಿನ ಉಪನ್ಯಾಸಕರಾದ ಪುಂಡಿಕಾಯಿ ಗಣಪಯ್ಯ ಭಟ್ಟರು ನೆರವೇರಿಸಿದರು. ವಿಶೇಷ ಅಭ್ಯಾಗತರಾಗಿ ಉದಯವಾಣಿಯ ಧನಂಜಯ ಅವರು ಆಗಮಿಸಿದ್ದರು. ಪುಸ್ತಕದ ಲೇಖಕರಾದ ಆತ್ಮಾರಾಮ ಶಾಸ್ತ್ರಿಯವರೂ ಉಪಸ್ಥಿತರಿದ್ದು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಗಣಪಯ್ಯ ಭಟ್ಟರು ಪುಸ್ತಕದ ಬಿಡುಗಡೆಯನ್ನು ಮಾಡಿ ಪುಸ್ತಕದ ಮೌಲಿಕತೆಯನ್ನು ಮತ್ತು ಪ್ರಯೋಜನವನ್ನು ಮಂದಟ್ಟಾಗುವಂತೆ ವಿವರಿಸಿದರು. ಧನಂಜಯ ಅವರೂ ಪುಸ್ತಕದ ಮಹತ್ವವನ್ನು ವಿವರಿಸಿದರು. ಕೊನೆಗೆ ಪ್ರಕಾಶನದ (ಗಾಯತ್ರಿ ಪ್ರಕಾಶನದ) ಪರವಾಗಿ ಗುರುಪ್ರಸಾದ ಹೆಬ್ಬಾರ್ ಧನ್ಯವಾದವನ್ನು ಅರ್ಪಿಸಿದರು.

ವರದಿ : **ಮಹೇಶ ಭಟ್ಟ, ಬೆಂಗಳೂರು**

# ಉಚ್ಚಿಲ ಕುಟುಂಬದವರ ಅಷ್ಟಮಂಗಲ ಪ್ರಶ್ನೆ

ಎರ್ಮಾಳಿನಲ್ಲಿ ಭೂಮಿಗತವಾಗಿರುವ ದೇವಸ್ಥಾನದ ಬಗ್ಗೆ ಗೊತ್ತುವರಿಗಾಗಿ ಉಚ್ಚಿಲ ಕುಟುಂಬದವರು ಇಟ್ಟ ಅಷ್ಟಮಂಗಲ ಪ್ರಶ್ನೆಯಲ್ಲಿ ಉಚ್ಚಿಲದಲ್ಲಿರುವ ಮೂಲ ಮನೆಯಲ್ಲಿ ಹಲವಾರು ದೋಷಗಳು ಕಂಡು ಬಂದು, ಇದರ ನಿವಾರಣೆಗಾಗಿ ಫೆಬ್ರವರಿ 23ರಿಂದ ಮಾರ್ಚ್ 2, 2010ರ ವರೆಗೆ ಪ್ರಶ್ನೆಯಲ್ಲಿ ನಮೂದಿಸಿದಂತೆ ಎಲ್ಲಾ ಶಾಂತಿ ಪರಿಹಾರ ಕ್ರಮಗಳನ್ನು ಸಾಂಗವಾಗಿ ನೆರವೇರಿಸ ಲಾಯಿತು. ಕೊನೆಯಲ್ಲಿ 12 ಮಾರ್ಚ್ 2011ರಲ್ಲಿ ಸ್ಥಳ ಶುದ್ಧಿಯನ್ನು ಮಂತ್ರವಾದಿ ಶ್ರೀ ಉಡುಪು ಮೂಲೆ ಗೋಪಾಲಕೃಷ್ಣ ಭಟ್ ಇವರಿಂದ ಹಾಗೂ 13ರಂದು ಪಂಚದೈವ ಸ್ಥಾಪನೆಯನ್ನು ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರಿಂದ ವಿಜೃಂಭಣೆಯಿಂದ ನೆರವೇರಿಸ ಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಉಚ್ಚಿಲ, ಎರ್ಮಾಳು, ಸಾಂತೂರು, ಕಾರಂದೂರು ಹಾಗೂ ಕಿಗ್ಗದ ಕುಟುಂಬಸ್ಥರು ತನು-ಮನ-ಧನದಿಂದ ಮನಃಪೂರ್ವಕವಾಗಿ ಭಾಗವಹಿಸಿ, ಎಲ್ಲರ ಸುಖ ಶಾಂತಿ ಆಯುರಾರೋಗ್ಯ ಹಾಗೂ ಉನ್ನತಿಗೆ ಪ್ರಾರ್ಥಿಸಿದರು. ಕುಟುಂಬದ ಹಿರಿಯರಾಗಿ ಶ್ರೀ ಉಚ್ಚಿಲ ಗೋಪಾಲಕೃಷ್ಣ ರಾಯರು ಎಲ್ಲಾ ದೇವತಾ ಕಾರ್ಯಗಳನ್ನು ಮಾಡಿದರು. ಉಚ್ಚಿಲ ದಲ್ಲಿರುವ ಆರು ದೈವಗಳ ಕೋಲ ಹಾಗೂ ಭೂಮಿಗತ ದೇವಸ್ಥಾನದ ಬಗ್ಗೆ ಅಷ್ಟಮಂಗಲ ಪ್ರಶ್ನೆಯನ್ನು 2011ರ ಉತ್ತರಾಯಣದ ನಂತರ ಶುಭ ಮುಹೂರ್ತದಲ್ಲಿ ನೆರವೇರಬೇಕೆಂದು ನಿಶ್ಚಯಿಸಲಾಗಿದೆ.

ಮಾಹಿತಿ : **ಉಚ್ಚಿಲ ವಸಂತ ರಾವ್, ಮುಂಬಯಿ**



Krishna Rao

Ph :2520652
Mob. :9902029048

KISHAN



Studio & Video



Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.


# ಇನ್ನಂಜೆ : ಶ್ರೀ ಜಗದೀಶ್‌ರಾವ್‌ರವರ ಬೀಳ್ಕೊಡುಗೆ ಸಮಾರಂಭ



ಇನ್ನಂಜೆ ಎಸ್.ವಿ.ಎಸ್. ನರ್ಸರಿ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿವೃತ್ತರಾದ ಶ್ರೀ ಜಗದೀಶ್‌ರಾವ್‌ರವರ ಬೀಳ್ಕೊಡುವ ಸಮಾರಂಭವು ಇತ್ತೀಚೆಗೆ ನಡೆಯಿತು. ಸಮಾರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪುಂಡರೀಕಾಕ್ಷ ಮಿತ್ತಂತಾಯ, ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರಭಾವತಿ ಎಸ್.ಅಡಿಗ, ಶಿಕ್ಷಕ ವೃಂದ ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ಜಗದೀಶ್‌ರಾವ್ ಶಿರ್ವ ಮಾಣಿಬೆಟ್ಟು ದಿ| ಶಂಕರನಾರಾಯಣ ರಾಯರ ಪುತ್ರರಾಗಿದ್ದು, ಶಿರ್ವದ ಶ್ರೀ ಶಾರದಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆಗೆ ಸೇರಿದ್ದು, ನಂತರ ವರ್ಗಾವಣೆಗೊಂಡು ಕೆಲವು ವರ್ಷ ಅದಮಾರಿನ ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿದರು. ಅಲ್ಲದೆ ತನ್ನ ವೃತ್ತಿಯ ಕೊನೆಯ ಹಲವು ವರ್ಷಗಳನ್ನು ಇನ್ನಂಜೆ ಶಾಲೆಯಲ್ಲಿ ಪೂರೈಸಿದರು.

ಶ್ರೀ ಜಗದೀಶರಾಯರ ನಿವೃತ್ತ ಜೀವನವು ಸುಖಮಯವಾಗಲಿ ಎಂದು ಶ್ರೀಶಾರದಾ ಹಾರೈಕೆ.

# ಪಡುಬಿದ್ರಿಯಲ್ಲಿ ಶ್ರೀ ಶಂಕರ ಜಯಂತ್ಯುತ್ಸವ ಆಚರಣೆ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಮತ್ತು ಶ್ರೀ ಶಂಕರ ಪ್ರತಿಷ್ಠಾನ ಶ್ರೀ ಶೃಂಗೇರಿ ಶಂಕರ ಮಠ, ಕೋಟೆಕಾರು ಇದರ ಸಹಭಾಗಿತ್ವದಲ್ಲಿ ತಾ.15-05-2011ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿಯನ್ನು ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮುಂಬೈಯ ಶ್ರೀ ಬೈಲೂರು ಬಾಲಚಂದ್ರ ರಾವ್‌ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿರುವರು. ಶ್ರೀಯುತರು 'ಶ್ರೀ ಆದಿಶಂಕರಾಚಾರ್ಯ' ಎಂಬ ತಾವೆ ಬರೆದ ಕನ್ನಡ ನಾಟಕದ ಪ್ರತಿಯನ್ನು ನೀಡಿ ಎಲ್ಲಾ ಕಡೆ ಸ್ಥಾನಿಕ ಸಂಘಗಳು ಬೆಳೆಯುವುದರ ಮೂಲಕ ಸಮಾಜವನ್ನು ಬೆಳೆಸಬೇಕು. ಶ್ರೀಶಂಕರ ಅದ್ವೈತ ಸಿದ್ಧಾಂತವನ್ನು ಎಲ್ಲಾ ಕಡೆ ಪ್ರಚಾರ ಮಾಡುವುದರ ಮೂಲಕ ಶ್ರೀ ಶಂಕರಾಚಾರ್ಯರಿಗೆ ನಾವೆಲ್ಲ ಕೊಡುವ ಅತ್ಯಮೋಘ ಸೇವೆ ಆಗಿರುತ್ತದೆ ಎಂದು ಸಲಹೆಯನ್ನು ನೀಡಿದರು.

ಮತ್ತೋರ್ವ ಅತಿಥಿಯಾಗಿ ಆಗಮಿಸಿದ ಶ್ರೀ ಶಂಕರ ಮಠ, ಕೋಟೆಕಾರು, ಇದರ ಧರ್ಮಾಧಿಕಾರಿ ಶ್ರೀ ಬೊಳ್ಯಾವ ಸತ್ಯಶಂಕರ ಸನಾತನ ವೇದ ಧರ್ಮವಾದ ಅದ್ವೈತ ಸಿದ್ಧಾಂತವನ್ನು ವಿಸ್ತೃತವಾಗಿ ಹೇಳಿದರು. ಸಮಾರಂಭದಲ್ಲಿ ಸಂಘದ ವತಿಯಿಂದ ದಾನಿಗಳು ನೀಡಿದ ರೂ.53,000/- ವಿದ್ಯಾರ್ಥಿ ವೇತನವನ್ನು ಸಂಘದ ವ್ಯಾಪ್ತಿಯ ಪಿ.ಯು.ಸಿ./ಪದವಿ ಇಂಜಿನಿಯರಿಂಗ್ ಕಲಿಯುವ ಮಕ್ಕಳಿಗೆ ನೀಡಲಾಯಿತು. ಅಲ್ಲದೆ ಸಮಾಜದ ಪುರೋಹಿತರಾದ ಶಿವಪ್ರಸಾದ ಶಾಸ್ತ್ರಿಯವರು ಮಗಳಾದ ಕು| ಅಕ್ಷತರವರು ಸ್ಥಳೀಯ ಸಾಗರ ವಿದ್ಯಾಮಂದಿರದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದಕ್ಕಾಗಿ (92%) ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಜರಗಿತು.

ಸಂಘದ ಅಧ್ಯಕ್ಷರಾದ ಎಂ.ಕೆ. ಮೋಹನರಾವ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಗೌರವಾಧ್ಯಕ್ಷರಾದ ಪಿ.ಬಿ.ವಾಸುದೇವ ರಾವ್‌ರವರು ಉಪಸ್ಥಿತರಿದ್ದರು. ಸಂಘದ ನಿರ್ದೇಶಕರಾದ ಸೀತಾದೇವಿಯವರು ಧನ್ಯವಾದವಿತ್ತರು.

ವರದಿ : **ಶ್ರೀನಿವಾಸ ಶರ್ಮ, ಪಾದೆಬೆಟ್ಟು**

# ಪುಣ್ಯಸ್ಮರಣೆ



ಜನನ : 08-08-1938 ಮರಣ : 17-07-2008

**ಡಾ| ಎಲ್ಲೂರು ಚಂದ್ರಶೇಖರ ರಾವ್**

**ಸರಿದುವು ಮೂರು ವರುಷಗಳು ನಿಮ್ಮ ಬದುಕಿನಾ ನೆನಪಿನಲಿ**
**ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ**

ಶ್ರೀಮತಿ ಇಂದಿರಾ (ಪತ್ನಿ)
ಡಾ| ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ರಾವ್ ಮತ್ತು ಶ್ರೀ ಕೆ. ಎಸ್. ಮುರಲೀಧರ ರಾವ್ ಮತ್ತು ಮೊಮ್ಮಕ್ಕಳು

# ಸ್ವೀಡನ್ ದೇಶದ ಪ್ರವಾಸ ಅನುಭವಗಳು

– ಡಾ। ವೈ. ರವೀಂದ್ರನಾಥ ರಾವ್, ಬ್ರಹ್ಮಾವರ

ನನ್ನ ದೃಷ್ಟಿಯಲ್ಲಿ ಸ್ವೀಡನ್ ದೇಶವು ಜಗತ್ತಿನಲ್ಲೇ ನಾಲ್ಕು ವಿಷಯಗಳಿಗೆ ಹೆಸರುವಾಸಿಯಾಗಿದೆ. ಒಂದು ಅಲ್ಲಿನ ವಿಶ್ವಪ್ರಸಿದ್ಧ ಅತ್ಯಂತ ವೈಜ್ಞಾನಿಕ ಕ್ಷೇಮಾಭಿವೃದ್ಧಿ ವ್ಯವಸ್ಥೆಗಳು ಮತ್ತು ಯೋಜನೆಗಳು, ಮುಖ್ಯವಾಗಿ ಹೆರಿಗೆ ಸೌಲಭ್ಯಗಳು, ನಿರುದ್ಯೋಗಿಗಳಿಗಾಗಿರುವ ಯೋಜನೆಗಳು, ಮಕ್ಕಳ ಪಾಲನೆ, ಉಚಿತ ಶಿಕ್ಷಣ ಮತ್ತು ವಯೋವೃದ್ಧರ ಪಾಲನೆ ಇತ್ಯಾದಿ. ಈ ದೇಶವನ್ನು 'ಹೆತ್ತವರಿಗಾಗಿರುವ ನಂದನವನ' (Paradise for Parents) ಎಂದೂ ವರ್ಣಿಸಲಾಗಿದೆ. ಹಾಗೆಯೇ ಇನ್ನು ಮೂರು ವಿಷಯಗಳು ನೋಬೆಲ್ ಪ್ರಶಸ್ತಿ, ಅತ್ಯುತ್ತಮ ಭದ್ರತಾ ವ್ಯವಸ್ಥೆಗಳು ಮತ್ತು ವೋಲ್ವೊ ಕಂಪೆನಿಯ ಕಾರುಗಳು, ಬಸ್ಸುಗಳು (ಈಗ ನಮ್ಮ ಊರುಗಳಲ್ಲೂ ಕಾಣಬಹುದು) ಮತ್ತು ವಿಮಾನದ ಮೆಶಿನ್‌ಗಳು. ಸ್ವೀಡನ್ ವಿಸ್ತಾರದಲ್ಲಿ ಯುರೋಪಿನ ಐದನೇ ಅತ್ಯಂತ ದೊಡ್ಡ ದೇಶ ಮತ್ತು ನಾರ್ಡಿಕ್ ದೇಶಗಳಲ್ಲೂ ಇದು ದೊಡ್ಡದಾಗಿದೆ. ಸರಾಸರಿ ಜೀವಿತಾವಧಿಯಲ್ಲಿ ಇದು ಯುರೋಪಿನಲ್ಲೇ ಅತ್ಯಂತ ಹೆಚ್ಚಿರುವ (81) ದೇಶವಾಗಿದೆ. ಸ್ವೀಡನ್‌ನ ರಾಜಧಾನಿ ಸ್ಟಾಕ್‌ಹೋಂ. ಹಲವಾರು ದ್ವೀಪಗಳಿಂದ ಕೂಡಿದ ಸುಂದರ ನಗರವಾದುದರಿಂದ ಇದನ್ನು 'ಸಮುದ್ರದ ಮೇಲಿನ ಸೌಂದರ್ಯ' (Beauty on the Sea) ಎಂದು ಕರೆಯಲಾಗಿದೆ. ಇದರ ಇತರ ನಗರಗಳು ಗೊಟೆಬರ್ಗ್, ಮಾಲ್ಮೊ ಮತ್ತು ಉಪ್ಸಾಲಾ. ಸ್ವೀಡನ್‌ನ ತೀರಾ ಹತ್ತಿರದ ದೇಶಗಳು ನಾರ್ವೆ, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್. ಹಾಗೆಯೇ ಇತರ ನೆರೆಹೊರೆಯ ದೇಶಗಳು ಇಂಗ್ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಪೋಲ್ಯಾಂಡ್ ಮತ್ತು ಫ್ರಾನ್ಸ್. ಇಲ್ಲಿನ ಹಣದ ಚಲಾವಣೆ (Currency)ಯು 'ಕ್ರೋನಾ'. ಇದರ ಬಹುವಚನ ಪದ ಕ್ರೋನರ್. ಒಂದು ಕ್ರೋನಾ ಎಂದರೆ ಸುಮಾರು 7 ರೂಪೈ ಮೌಲ್ಯವಾಗಿದೆ. 1 ಕ್ರೋನಾದಲ್ಲಿ 100 ಓರ್ ಇರುತ್ತವೆ. ಸ್ವೀಡನ್ ವಿಮಾನ ನಿಲ್ದಾಣ ಮತ್ತು ಇತರ ವಿನಿಮಯ ಬ್ಯಾಂಕುಗಳಲ್ಲಿ ಹಣದ ವಿನಿಮಯ ಮಾಡಿಕೊಳ್ಳುವಲ್ಲಿ ಅವರು ಅಮೇರಿಕನ್ ಡಾಲರ್ ಅಲ್ಲದೆ ಭಾರತೀಯ ಹಣವನ್ನೂ ಸ್ವೀಕರಿಸಿದ್ದರು.

ನಾನು ಸ್ವೀಡನ್‌ನಲ್ಲಿದ್ದದ್ದು ಗೊಟೆಬರ್ಗ್ ನಗರದಲ್ಲಿ. 2010 ಜುಲೈ 10ರಿಂದ 18ರ ವರೆಗೆ ಸಮಾಜಶಾಸ್ತ್ರದ ಜಾಗತಿಕ ಸಮ್ಮೇಳನದಲ್ಲಿ ನನ್ನ ಆಯ್ಕೆಯಾದ ಸಂಶೋಧನಾ ಪ್ರಬಂಧದ ಮಂಡನೆಗಾಗಿ ಮತ್ತು ಅಲ್ಲಿನ ಗೋಷ್ಠಿಯೊಂದರ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸಲುವಾಗಿ ಭಾರತದೇಶದ ಪ್ರತಿನಿಧಿಯಾಗಿ ಇಲ್ಲಿ ಕೆಲಕಾಲ ತಂಗುವ ಅವಕಾಶ ಲಭಿಸಿತು. ಇಂತಹದ್ದೆ ಉದ್ದೇಶಕ್ಕಾಗಿ ಈ ಹಿಂದೆ ನಾನು ದಕ್ಷಿಣ ಅಫ್ರಿಕಾದ ಡರ್ಬನ್‌ನಲ್ಲಿ ಕೆಲಕಾಲ ಕಳೆದ ಮೇಲೆ ಬೇರೊಂದು ಖಂಡಕ್ಕೆ ಭೇಟಿ ನೀಡುವ ಮೂಲಕ, ಇದು ನನ್ನ ಎರಡನೇ ವಿದೇಶ ಪ್ರಯಾಣವಾಗಿತ್ತು. ಗೊಟೆಬರ್ಗ್ ಅನ್ನು ಗೊತೆನ್‌ಬರ್ಗ್, ಗೋಟ್‌ಬರ್ಗ್ ಎಂದೂ, ಮತ್ತು ಸ್ವೀಡಿಶ್ ಭಾಷೆಯಲ್ಲಿ 'ಯ್ಯುಗೆತ್‌ಬೋರ್' ಎಂದೂ ಕರೆಯುತ್ತಾರೆ. ಈ ಹೆಸರಿನ ಉಗಮವು ಅಲ್ಲಿ ಹರಿಯುತ್ತಿರುವ ಗೋಟಾ (ಗೋಥಿಯಾ ಎಂದೂ ಹೆಸರಿದೆ) ನದಿಯಿಂದ ಉಂಟಾಗಿದೆ. ಸ್ಕಾಟಿಷ್ ಮತ್ತು ಇಂಗ್ಲೀಷ್ ವ್ಯಾಪಾರಸ್ಥರ ಆಗಮನದಿಂದಿಗಾಗಿ ಈ ನಗರವು 19ನೇ ಶತಮಾನದಲ್ಲಿ ಹೆಚ್ಚು ಕೈಗಾರೀಕರಣಗೊಂಡಿತು. ಗೊಟೆನ್‌ಬರ್ಗ್, ಮರಗಳಿಂದ ವಿಶಾಲವಾದ ರಸ್ತೆಗಳಿಂದ, ಉದ್ಯಾನಗಳಿಂದ ಮತ್ತು ಕಲ್ಲಿನ ಹಾಗೂ ಹಳೆ ನಗರಗಳಲ್ಲಿ ಮರಗಳಿಂದ, ರಚಿಸಿದ ಕಟ್ಟಡಗಳಿಂದ ಕೂಡಿದ ನಗರವಾಗಿದೆ.

ನಾನು ಜುಲೈ 9ರಂದು ಬೆಂಗಳೂರಿನಿಂದ ಸಂಜೆ 4–30 ಗಂಟೆಗೆ ಜೆಟ್ ಏರ್‌ವೇಸ್‌ನಲ್ಲಿ ಹೊರಟು ಮುಂಬೈ ಛತ್ರಪತಿ ಶಿವಾಜಿ ವಿಮಾನ ನಿಲ್ದಾಣವನ್ನು 6 ಗಂಟೆಗೆ ಮುಟ್ಟಿದೆ. ದೇಶೀಯ ವಿಮಾನ ನಿಲ್ದಾಣದಿಂದ ಅಂತರಾಷ್ಟ್ರೀಯ ವಿಮಾನಿಲ್ದಾಣಕ್ಕೆ ಹೋಗಲು ವಿಮಾನ ನಿಲ್ದಾಣದಲ್ಲಿ ಬಸ್ಸು ವ್ಯವಸ್ಥೆ ಇತ್ತು. ಅದಕ್ಕಾಗಿ ನಮ್ಮ ಟಿಕೆಟ್ ತೋರಿಸಿ ಒಂದು ಪಾಸು ಪಡೆದುಕೊಳ್ಳಬೇಕಾಗುತ್ತದೆ. ನನ್ನ ಹುಟ್ಟು ಹಬ್ಬವನ್ನು ಆ ದಿವಸ ಹೀಗೆಯೇ ಬಸ್ಸು, ವಿಮಾನಗಳ ಪ್ರಯಾಣಗಳಲ್ಲೇ ಮೌನವಾಗಿ ಆಚರಿಸಲಾಯಿತು. ಬಳಿಕ ರಾತ್ರಿ 12–50ಕ್ಕೆ ಲುಫ್ತಾಂಝ ವಿಮಾನದ ಮೂಲಕ ಜರ್ಮನಿಯ ಮುನಿಚ್ (ಜರ್ಮನಿ ಭಾಷೆಯಲ್ಲಿ ಮ್ಯುಶಿಯಾನ್) ಬೆಳಗ್ಗೆ 6 ಗಂಟೆಗೆ ತಲುಪಿದೆನು. ಇಲ್ಲಿ ಗೊಟೆಬರ್ಗ್‌ನ ವಿಮಾನ ಏರಲು ಮೂರುವರೆ ಗಂಟೆಯ ಕಾಲಾವಧಿ ಇತ್ತು. ಇಲ್ಲಿನ ಲೌಂಜ್ (Lounge)ನಲ್ಲಿ ಮಾತ್ರ ಉಚಿತವಾಗಿ ಪಡೆಯಬಹುದಾದ ಕಾಫಿ ಹಾಗೂ ಇತರ ಪಾನೀಯಗಳು, ಪತ್ರಿಕೆಗಳೂ ಇದ್ದವು. ಹಾಗೆಯೇ ಜರ್ಮನಿಯ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಮಾಕ್ಸ್ ವೆಬರ್ (ಜರ್ಮನ್ ಭಾಷೆಯಲ್ಲಿ ವೀಬರ್) ಮೂನಿಚ್ ವಿಶ್ವವಿದ್ಯಾನಿಲಯದಲ್ಲಿ ಕೆಲಕಾಲ ಪ್ರಾಧ್ಯಾಪಕರಾಗಿದ್ದ ವಿಷಯ ಈ ವೇಳೆಯಲ್ಲಿ ನನ್ನ ಮನಸ್ಸಿಗೆ ಬಂತು. ಬಳಿಕ ಗೊಟೆಬರ್ಗ್‌ನ ಲ್ಯಾಂಡ್‌ವೆಟರ್ ವಿಮಾನ ನಿಲ್ದಾಣವನ್ನು ನಾನು 11–15ಕ್ಕೆ ತಲುಪಿದೆನು. ನಾವು ಕೆಲವು ಭಾರತೀಯ ಪ್ರತಿನಿಧಿಗಳು ಸೇರಿ ಟ್ಯಾಕ್ಸಿ ಮಾಡಿ ಸುಮಾರು 12–30ರೊಳಗೆ ನಮ್ಮ ನಮ್ಮ ವಸತಿಗಳನ್ನು ತಲುಪಿದೆವು. ಟ್ಯಾಕ್ಸಿಯೂ ಅತ್ಯಾಧುನಿಕ ಕಂಪ್ಯೂಟರೀಕೃತ ದಿಕ್ಕು, ಸ್ಥಳ, ದೂರ ಇತ್ಯಾದಿ ಮಾಹಿತಿಗಳನ್ನು ನೀಡುವ ವ್ಯವಸ್ಥೆ ಹೊಂದಿತ್ತು. ಟ್ಯಾಕ್ಸಿ ಚಾಲಕ ಈ ಹಿಂದೆ ಹಡಗಿನ ಉದ್ಯೋಗದಲ್ಲಿದ್ದವರಾಗಿದ್ದು ನಮ್ಮ ಜೊತೆ ಪ್ರಯಾಣದುದ್ದಕ್ಕೂ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದರು.

ನಾನು ತಂಗಿದ್ದ ಹೋಟೆಲ್, ನಗರದ ಉಟ್ಲಾಂಡಗಾಟನ್ ಪ್ರದೇಶದ ಎಸ್‌ಜಿಎಸ್ ವೆಕೋಬೊಸ್ಟಾಡರ್. ಇದು ಗೆಸ್ಟ್‌ಹೌಸ್ ಅಥವಾ ಹಾಸ್ಟೆಲ್‌ನಂತಿರುವ ರೆಸ್ಟೋರೆಂಟ್ ಇಲ್ಲದ ಹೋಟೆಲ್. ನಮಗೆ ಅಡುಗೆ ಮಾಡಿಕೊಳ್ಳುವುದಾದರೆ ಪ್ರತ್ಯೇಕ ಎಲ್ಲಾ ಸೌಕರ್ಯಗಳನ್ನೊಳಗೊಂಡ ಅಡುಗೆ ಮನೆ ಮತ್ತು ಲಾಂಡ್ರಿ ಕೋಣೆಗಳನ್ನು ಉಪಯೋಗಿಸಬಹುದಾದ ರೂಂ ಕೀಲಿಕೈ ಈ ಮೂರಕ್ಕೂ ಮಾಸ್ಟರ್ ಕೀ ಆಗಿತ್ತು. ಪ್ಲಾನ್/ಸ್ಕೆಚ್‌ನೊಂದಿಗೆ ಅಲ್ಲಿನ ವಸತಿಯ ಸೇವೆ, ಸೌಲಭ್ಯಗಳ ಕುರಿತು ಅವರು ನೀಡಿದ ಸ್ವೀಡಿಶ್ ಮತ್ತು ಇಂಗ್ಲೀಷ್ ಭಾಷೆಯ ಮಾಹಿತಿ ಪತ್ರದಿಂದ ನನಗೆ ಹೆಚ್ಚಿನ ವಿಷಯ ತಿಳಿದುಕೊಳ್ಳಲು ಅನುಕೂಲವಾಯಿತು. ನಮ್ಮ ಸಮ್ಮೇಳನ ನಡೆಯುವ ಸಭಾಂಗಣದ ಹೆಸರು ಸ್ವೆಂಸಾಮಾಸನ್. ಇದು ಇರುವ ಸ್ಥಳ ಕೋರ್ಸ್‌ವೆಗನ್. ನನ್ನ ವಸತಿಯಿಂದ 7–8 ನಿಮಿಷದ ಕಾಲುದಾರಿ. ಮರುದಿವಸ ಬೆಳಗ್ಗೆ ಸಮ್ಮೇಳನ ಉದ್ಘಾಟನೆಗೊಳ್ಳುವುದರಿಂದ ಮತ್ತು ಆ ದಿವಸ ನನಗೆ ಸಂಜೆ ಸಮಯ ಕಳೆಯಲು ನಮ್ಮ ದೇಶದಲ್ಲಿರುವ ಹಾಗೆಯೇ ಎಂದೆಣಿಸಿ, ಸಭಾಂಗಣವನ್ನು ನೋಡಿ, ಸಂಘಟಕರನ್ನು ಬೇಟಿಯಾಗಿ ಬರೋಣವೆಂದು ನಾನು ಸುಮಾರು 3–30 ಗಂಟೆಗೆ ಅಲ್ಲಿಗೆ ನಡೆದೆ. ಆದರೆ ಅವರು ಆವಾಗಲೇ (ಬಹುಶಃ ಹಿಂದಿನ ದಿನ ಮತ್ತು ಬೆಳಗ್ಗೆಯೇ) ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿ ಸಭಾಂಗಣವನ್ನು ಮುಚ್ಚಿ ಹೋಗಿದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು.

ನಗರದಲ್ಲಿ ಓಡಾಡಲು ಸಾಕಷ್ಟು ಟ್ರ್ಯಾಮ್‌ಗಳು, ಬಸ್ಸುಗಳು ಮತ್ತು ಕೆಲವುಕಡೆ ಫೆರಿಗಳಿದ್ದವು. ಈ ಮೂರು ರೀತಿಯ ಸಾರಿಗೆಗಳಲ್ಲೂ ಉಪಯೋಗಿಸಬಹುದಾದ ಪ್ರಯಾಣದ ಕಾರ್ಡುಗಳನ್ನು ಅಂಗಡಿಗಳಿಂದಲೇ ಖರೀದಿಸಬೇಕಿತ್ತು. ಕಾರ್ಡನ್ನು ವಾಹನದೊಳಗಿರುವ ಸ್ಕ್ಯಾನರ್ ಮೆಶಿನ್‌ಗೆ ತಾಗಿಸಿ ಪ್ರಯಾಣಿಸುವ ವ್ಯವಸ್ಥೆಯಾಗಿದೆ. ಅದೇ ರೀತಿ ಕ್ರೆಡಿಟ್ ಕಾರ್ಡುಗಳನ್ನು ಉಪಯೋಗಿಸಲೂ ಅವಕಾಶವಿತ್ತು. ಬಸ್ಸುಗಳು ಚಲಿಸುವ ರಸ್ತೆಗಳಲ್ಲೇ ಟ್ರಾಮುಗಳೂ ಓಡಾಡುತ್ತಿದ್ದರೂ ಯಾವುದೇ ಗೊಂದಲವಿಲ್ಲದೆ ಸರಿಯಾದ ಸಮಯಕ್ಕೆ ಎಲ್ಲಾ ವಾಹನಗಳು ಬರುತ್ತಿದ್ದವು ಮತ್ತು ಅವುಗಳ ಚಲನೆಯ ಮಾಹಿತಿ ಹೆಚ್ಚಿನ ಎಲ್ಲಾ ಮುಖ್ಯ ಬಸ್‌ಸ್ಟಾಪ್‌ಗಳಲ್ಲಿ ಡಿಜಿಟಲ್ ಡಿಸ್‌ಪ್ಲೇ ಮೂಲಕ ನೀಡಲಾಗುತ್ತಿತ್ತು. ದಪ್ಪ ಗಾಜುಗಳಿಂದ ಮಾಡಿದ (ವಾಹನಗಳ ಬರುವಿಕೆ ಸರಿಯಾಗಿ ಕಾಣಲು) ಎಲ್ಲಾ ಬಸ್ ಸ್ಟಾಪ್‌ಗಳಲ್ಲಿ ವಾಹನಗಳ ವೇಳಾಪಟ್ಟಿ, ನಗರದ ಭೂಪಟ, ವಿಮಾನ ನಿಲ್ದಾಣ ಬಸ್ಸುಗಳ ಪ್ರತ್ಯೇಕ ವೇಳಾಪಟ್ಟಿ ಹಾಗೂ ಇತರ ಉಪಯುಕ್ತ ಮಾಹಿತಿಗಳನ್ನು ಗಾಜು ಫ್ರೇಮ್‌ನಲ್ಲಿ ಜೋಡಿಸಿಡಲಾಗಿದೆ. ಇವುಗಳು ಸ್ವೀಡಿಷ್ ಭಾಷೆ ಮತ್ತು ಕೆಲವು ಕಡೆ ಇಂಗ್ಲೀಷ್‌ನಲ್ಲಿರುತ್ತಿತ್ತು. ಆದರೆ ನಗರದ ಎಲ್ಲಾ ಕಡೆ ಅಂಗಡಿ ನಾಮಫಲಕಗಳನ್ನು, ದಿಕ್ಕು ಸೂಚಿಸುವ ಫಲಕಗಳನ್ನು, ಬಸ್, ಟ್ಯಾಮ್‌ನಲ್ಲಿ ಸ್ಥಳಗಳ ಹೆಸರುಗಳನ್ನು ಅಥವಾ ದೂರವಾಣಿ ಬೂತ್‌ನೊಳಗಿರುವ ಸೂಚನೆ–ಮಾಹಿತಿಗಳನ್ನು ಸ್ವೀಡಿಶ್ ಭಾಷೆಯಲ್ಲಿ ಮಾತ್ರ ಬರೆಯಲಾಗಿತ್ತು. ಹಾಗಾಗಿ ನನಗೆ ಸಾರ್ವಜನಿಕ ದೂರವಾಣಿಯೊಳಗಿನ ಸೂಚನೆಗಳನ್ನು ಓದಲಾಗದೆ ಬೂತ್‌ನ್ನು ಉಪಯೋಗಿಸಲಾಗಿಲ್ಲ. ಸ್ವೀಡಿಶ್ ಭಾಷೆಗೂ ರೋಮನ್ ಲಿಪಿಯಾದುದರಿಂದ ಸಾಧಾರಣ ಮಟ್ಟಿಗೆ ಪದಗಳನ್ನು ಓದಬಹುದಾದರೂ ಅರ್ಥಮಾಡಿಕೊಳ್ಳಲು ಅಸಾಧ್ಯ. ಆದರೂ ಕೆಲವು ಸಾಮಾನ್ಯ ಪದಗಳನ್ನು ಮಾತ್ರ ಗ್ರಹಿಸಿ ಅರ್ಥಮಾಡಿಕೊಳ್ಳಬಹುದು. ಉದಾ:ಬಸ್ (Buss), ಟೆಲಿಫೋನ್ (Telefon), ಕೋಣೆ (Rum), ಸ್ವಾಗತ (Valkommen), ರವಿವಾರ (Sondag), ಸೋಮವಾರ (Mandag) ಇತ್ಯಾದಿ.


ನಾನು ಸ್ವೀಡನ್‌ನಲ್ಲಿದ್ದ ಕಾಲ ಬೇಸಗೆಯಾಗಿತ್ತು. (ಜೂನ್‌ನಿಂದ ಆಗೋಸ್ಟ್ ಬೇಸಗೆ ಕಾಲ). ಆಗ ಹಗಲಿಗೆ ಉಷ್ಣತೆಯು ಸಾಧಾರಣ 20ರಿಂದ 25 ಡಿಗ್ರಿ ಇರುತ್ತದೆ. ಈ ಕಾಲದಲ್ಲಿ ಹಗಲು ಹೆಚ್ಚಾಗಿದ್ದು, ಅದು ಜುಲೈ ತಿಂಗಳಲ್ಲಿ ಸುಮಾರು 18 ಗಂಟೆಗಳ ಕಾಲ ಇರುತ್ತದೆ ಮತ್ತು ರಾತ್ರಿಗಳ ಅವಧಿ ತೀರಾ ಕಡಿಮೆ. ಹಾಗಾಗಿ ನನಗೆ ಪ್ರಾರಂಭದ ಒಂದೆರಡು ದಿನ ರೂಂನಲ್ಲಿ ಕಪ್ಪು ಕಿಟಕಿ ಪರದೆ ಹಾಕಿದ್ದರೂ ಈ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಸ್ವಲ್ಪ ಕಷ್ಟವಾಯಿತು. ಇದೇ ಸಂದರ್ಭದಲ್ಲಿ ಗೊಟೆನ್‌ಬರ್ಗ್‌ನಲ್ಲಿ ಯೂರೋಪ್ ಖಂಡದ ಅಂತರ್‌ದೇಶೀಯ ಮಹಿಳಾ ಕಿರಿಯರ ವಿಭಾಗದ ಫೂಟ್‌ಬಾಲ್ ಪಂದ್ಯಾಟ ಕೂಡಾ ನಡೆದಿತ್ತು. ಮತ್ತು ಹೆಚ್ಚಿನ ಆಟಗಾರರು ನಾನು ತಂಗಿದ್ದ ವಸತಿಯಲ್ಲಿದ್ದು, ಮಧ್ಯೆ ವಿಶಾಲ ಹುಲ್ಲುಗಾವಲಿನಲ್ಲಿ ಆಗಾಗ್ಗೆ ಪೂರ್ವಾಭ್ಯಾಸ ಕೂಡಾ ನಡೆಸುತ್ತಿದ್ದರು. ರೂಂನಲ್ಲಿದ್ದ ವೇಳೆ ಇದರಿಂದ ನನಗೆ ಕೆಲವೊಮ್ಮೆ ಸಮಯ ಕಳೆಯಲು ಅನುಕೂಲವಾಗುತ್ತಿತ್ತು. ವಸತಿಯ ಹುಲ್ಲುಗಾವಲಿನಲ್ಲಿ ಬ್ರೆಡ್ ಕಾಯಿಸಿಕೊಳ್ಳಲು ಕೂಡಾ ಸೌಲಭ್ಯವಿತ್ತು. ವಸತಿಯ ಕೋಣೆಗಳನ್ನು, ಲಾಂಡ್ರಿ, ಅಡುಗೆ ಮನೆಗಳನ್ನು ಶುಚಿಗೊಳಿಸಲು ಬರುತ್ತಿದ್ದವರು ಅರೆಕಾಲಿಕ ಕೆಲಸ ಮಾಡುವ ಕಾಲೇಜು ವಿದ್ಯಾರ್ಥಿನಿಯರು. ಕೆಲಸ ಮಾಡಿಕೊಂಡು ವಿದ್ಯೆ ಕಲಿಯುವ ವಿದ್ಯಾರ್ಥಿಗಳು ಹಣದೊಂದಿಗೆ ಇಲ್ಲಿ ಗೌರವವನ್ನೂ ಸಂಪಾದಿಸುತ್ತಾರೆ. ನಮ್ಮ ದೇಶದಲ್ಲಿ ಈ ಮನೋಭಾವನೆ ಯಾವಾಗ ಬೆಳೆಯಬಹುದೆಂದು ನನ್ನಷ್ಟಕ್ಕೇ ನಾನು ಆಗಾಗ್ಯೆ ಯೋಚಿಸುವುದುಂಟು.

ಒಟ್ಟು 104 ದೇಶಗಳಿಂದ 4981 ಪ್ರತಿನಿಧಿಗಳು ಈ ಜಾಗತಿಕ ಸಮ್ಮೇಳನಕ್ಕೆ ಬಂದಿದ್ದರು. ಸಮ್ಮೇಳನದಲ್ಲಿ ಅತಿ ಹೆಚ್ಚು ಎಂದರೆ 512 ಪ್ರತಿನಿಧಿಗಳು ಅಮೇರಿಕನ್ನರಾಗಿದ್ದರು. ಜರ್ಮನಿಯರು 423, ಇಂಗ್ಲೆಡಿನವರು 397 ಮತ್ತು ಸ್ವೀಡನ್‌ನಿಂದ 302 ಪ್ರತಿನಿಧಿಗಳಿದ್ದರು. ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಭಾರತ, ಫಿನ್‌ಲ್ಯಾಂಡ್, ಫ್ರಾನ್ಸ್, ಇಟಲಿ, ಜಪಾನ್, ಮೆಕ್ಸಿಕೊ, ನೆದರ್‌ಲ್ಯಾಂಡ್ಸ್, ಮೌರಿಷಸ್, ಪೋರ್ಚುಗಲ್, ರಷ್ಯಾ, ಸ್ಪೈನ್ ದೇಶಗಳಿಂದ 95ರಿಂದ 200 ಜನರು ಪ್ರತಿನಿಧಿಸಿದ್ದರು. ಉಳಿದವರು ಇತರ ದೇಶದವರು. ನಮ್ಮ ಸಮ್ಮೇಳನದ ಕೇಂದ್ರ ಸ್ಥಳ ಸ್ವೆಂಸಾಮಾಸನ್ ಸಭಾಂಗಣ ಆಗಿದ್ದರೂ, ಗೋಷ್ಠಿಗಳು ಸಮಯದೊಳಗೆ ವ್ಯವಸ್ಥಿತವಾಗಿ ನಡೆಯಲು ಅಲ್ಲೇ ಹತ್ತಿರದಲ್ಲಿರುವ ಗೊಟೆನ್‌ಬರ್ಗ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಐದು ವಿವಿಧ ವಿಭಾಗಗಳಲ್ಲಿ ಆಯೋಜಿಸಿದ್ದರು. ಅವುಗಳು ಹುಮ್ಯಾನಿಸ್ಟನ್ (Faculty of Arts), ಕ್ಯಾಪಸ್ ಹಾಗಾ (ಸ್ಯಾಂಫಕ್) (Faculty of Social Sciences), ಆರ್ಟಿಸ್ಟನ್ (School of Music & Dance), ಹ್ಯಾಂಡಲ್ಸ್ (School of Business, Economics & Law) ಮತ್ತು ಕ್ಯಾಂಪಸ್ ಲಿನ್ನೆ (Learning Centre). ನನ್ನ ಪ್ರಬಂಧ ಮಂಡನೆ ಮತ್ತು ಗೋಷ್ಠಿಯೊಂದರ ಅಧ್ಯಕ್ಷೀಯ ಕಾರ್ಯವು ಸ್ವೆಂಸಾಮಾಸನ್‌ನಿಂದ ವಾಹನದಲ್ಲಿ 13 ನಿಮಿಷ ಮತ್ತು ನಡಿಗೆಯಲ್ಲಿ 20 ನಿಮಿಷ ದೂರದಲ್ಲಿರುವ ಹ್ಯಾಂಡಲ್ಸ್ ಹಾಗ್ಸ್ ಕೊಲನ್‌ನಲ್ಲಿರುವ ಹ್ಯಾಂಡಲ್ಸ್‌ನಲ್ಲಿ ನಡೆಯಿತು. ಎಲ್ಲಾ ಗೋಷ್ಠಿಗಳು ನಡೆಯುವ ಸ್ಥಳಗಳಲ್ಲಿ ಪಿಪಿಟಿ ಸೌಲಭ್ಯ ಮತ್ತು ವಿದ್ಯಾರ್ಥಿ ಸಹಾಯಕರನ್ನು ಒದಗಿಸಿದ್ದರು. ಸಮ್ಮೇಳನದ ಕೇಂದ್ರ ಸ್ಥಳದಲ್ಲಿ ಜಗತ್ತಿನ ಪ್ರಸಿದ್ಧ ಪ್ರಕಾಶಕರಿಂದ ಪುಸ್ತಕ ಪ್ರದರ್ಶನಗಳು, ಆಹಾರ, ಪಾನೀಯ ಕೌಂಟರ್, ಉಚಿತ ಇಂಟರ್‌ನೆಟ್ ಸೌಲಭ್ಯ, ಸುಮಾರು 8000 ಪ್ರತಿನಿಧಿಗಳು ಆಸೀನರಾಗಬಹುದಾದ ಸಭಾಂಗಣ, ಗೋಷ್ಠಿಗಳಿಗಾಗಿ ರುವ ಕೊಠಡಿಗಳು, ಪ್ರತ್ಯೇಕವಾದ ಧೂಮಪಾನ ವಲಯ ಇದ್ದವು.

ಇಲ್ಲಿನ ವಾಹನಗಳು ಬಲಬದಿಯಲ್ಲಿ ಚಲಿಸುವು



ಸ್ವೀಡನ್‌ನಲ್ಲಿದ್ದಾಗ ಉಳಕೊಂಡಿದ್ದ ಹೋಟೆಲ್ ಎಸ್‌ಜಿಎಸ್ ವೆಕೊಬೊಸ್ಟಾಡರ್



ಗೊಟೆನ್‌ಬರ್ಗ್‌ನ ಒಂದು ಸ್ಟೇಡಿಯಂ ಸ್ವೀಡಿಶ್ ಭಾಷೆಯಲ್ಲಿ 'ಉಲ್ಲೇವಿ'



ಕೋರ್ಸ್‌ವೆಗನ್ ಬಸ್‌ನಿಲ್ದಾಣ ಮತ್ತು ನಿಂತಿರುವ ಟ್ರ್ಯಾಮ್



ಕೋರ್ಸ್‌ವೆಗನ್‌ನಲ್ಲಿರುವ ಸಮ್ಮೇಳನದ ಸಭಾಂಗಣ–ಸ್ವೆಂಸಾಮಾಸನ್

ದರಿಂದ ತಂಗುದಾಣಗಳಲ್ಲಿ ವಾಹನ ಏರಿ ಇಳಿಯುವಲ್ಲಿ ನನಗೆ ಪ್ರಾರಂಭದಲ್ಲಿ ಸ್ವಲ್ಪ ಗೊಂದಲವಾಗುತ್ತಿತ್ತು. ಇಲ್ಲಿ ಪೆಟ್ರೋಲ್ ಕಾರುಗಳು ಕೇವಲ ಶೇಕಡ 15 ಮತ್ತು ಸುಮಾರು 85% ಇತಿನಾಲ್ ಕಾರುಗಳೇ (ಇತಿನಾಲ್ ಗೋಧಿಯಿಂದ ಉತ್ಪಾದಿಸಿದ್ದಾಗಿದೆ). ನಮ್ಮ ದೇಶದಂತೆ ಸ್ವೀಡನ್ ಕೂಡಾ ಒಂದು ರೀತಿಯಲ್ಲಿ ಬಹುಧರ್ಮೀಯರ, ವಿವಿಧ ಪಂಗಡ ಗಳಿಂದ ಕೂಡಿದ ದೇಶವೆಂದರೆ ತಪ್ಪಾಗಲಾರದು. ಇಲ್ಲಿ ಸುಮಾರು 87% ಜನರು ಲುಥೇರಿಯನ್ ಪಂಗಡದವರು, ಉಳಿದವರು ರೋಮನ್ ಕೆಥೊ ಲಿಕ್, ಆರ್ಥೊಡಾಕ್ಸ್, ಬ್ಯಾಪ್ಟಿಸ್ಟ್, ಯಹೂದಿ ಯರು, ಮುಸ್ಲಿಮರು ಮತ್ತು ಕೆಲವರು ಬುದ್ಧ ಧರ್ಮೀಯರು. ಆದರೂ ಅವರೆಲ್ಲರೂ ಹೆಚ್ಚು ಜಾತ್ಯಾತೀತ ಹಾಗೂ ಉದಾರದೃಷ್ಟಿಕೋನ ಹೊಂದಿದವರಾಗಿದ್ದಾರೆ. ಶಾಲಾ ಶಿಕ್ಷಣ ಮುಗಿಸಿ ವಿದ್ಯಾರ್ಥಿಗಳು ಚರ್ಚುಗಳಿಗೆ ಹೋಗಿ ಹಾಡುವ ಕ್ರಮವಿದೆ. ಹಾಗೆಯೇ ಕ್ರಿಸ್‌ಮಸ್ ಸಮಯ ಅಥವಾ ಮಗುವಿಗೆ ನಾಮಕರಣ ಮಾಡುವ ಸಮಯವಷ್ಟೇ ಅಲ್ಲಿನ ಜನರು ಚರ್ಚುಗಳಿಗೆ ಹೋಗುತ್ತಾರೆಯೇ ಹೊರತು ಸಾಮಾನ್ಯವಾಗಿ ಚರ್ಚುಗಳಿಗೆ ಹೋಗುವವರ ಸಂಖ್ಯೆ ತೀರಾ ವಿರಳವಾಗಿದೆ. ಶಿಕ್ಷಣವು ಸ್ವೀಡಿಶ್ ಭಾಷೆಯಲ್ಲಿದ್ದು, ಇಂಗ್ಲೀಷ್ ಭಾಷೆಯನ್ನು ಕಲಿಯುತ್ತಾರೆ. ಜೊತೆಗೆ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವೂ ಇದೆ. ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ತಮಗಿಷ್ಟವಾದ ಬಟ್ಟೆಗಳನ್ನು ತೊಡಲು ಇಲ್ಲಿ ಸ್ವಾತಂತ್ರ್ಯವಿದೆ.

ಅಧಿಕೃತ ವಿವಾಹವೆಂದರೆ ಅದು ಚರ್ಚುಗಳಲ್ಲಿ ಕೆಲವು ನಿಮಿಷಗಳಲ್ಲಿ ಮುಗಿಯುತ್ತದೆ. ಬಹಳ ದೊಡ್ಡ ರೀತಿಯಲ್ಲಿ ಚರ್ಚುಗಳಲ್ಲೆ ವಿವಾಹ ಸಂಸ್ಕಾರವೆಂದರೆ ಹೆಚ್ಚೆಂದರೆ ಒಂದು ಗಂಟೆ ಕಾಲ ನಡೆಯುತ್ತದೆ. ಇಲ್ಲವಾದರೆ ಹೆಚ್ಚಾಗಿ 'ವಿವಾಹೇತರ ಕೂಡು ಜೀವನ' (Live in) ಸಂಬಂಧಗಳೇ ಇರುತ್ತವೆ. ಅಡುಗೆ ಕಾರ್ಯವನ್ನು ಪತಿಪತ್ನಿಯರು ಜೊತೆ ಸೇರಿ ನಡೆಸುತ್ತಾ, ಬೇಸಗೆ ಸಮಯ ಹೆಚ್ಚಾಗಿರುವುದರಿಂದ ಗಂಡ ಹೆಂಡತಿ ತಮ್ಮ ಮಕ್ಕಳೊಂದಿಗೆ (ಗಾಲಿ ಕುರ್ಚಿಗಳಲ್ಲಿ ಕುಳ್ಳಿರಿಸಿ ದೂಡುತ್ತಾ) ಮನೆಯ ಹೊರಗಡೆಯೇ ವಿಹಾರದಲ್ಲಿರುತ್ತಾರೆ ಮತ್ತು ಚಳಿಗಾಲದಲ್ಲಿ ಹೆಚ್ಚಾಗಿ ಇವರೆಲ್ಲರೂ ಮನೆಯಲ್ಲಿಯೇ ಇರುತ್ತಾರೆ. ಈ ಸಮಯದಲ್ಲಿ ಹವಾಮಾನವು ಸುಮಾರು 7 ಡಿಗ್ರಿಗಳಷ್ಟಿದ್ದು ಎಲ್ಲಾ ಕಡೆ ಹಿಮ ಆವರಿಸಿರುತ್ತದೆ. ಸುಮಾರು ಒಂದು ವಾರ ಬಸ್ಸು, ಟ್ರಾಮುಗಳೂ ಸ್ಥಗಿತವಾಗುವ ಸಂದರ್ಭಗಳಿರುತ್ತವೆ. ಹಾಗೆಯೇ ಆ ಸಮಯ 2-3 ದಿವಸ ವಿಮಾನ ನಿಲ್ದಾಣಕ್ಕೆ ಹೋಗುವ ಬಸ್ಸುಗಳೂ ಇರುವುದಿಲ್ಲ. ಸ್ವೀಡನ್ ಸಮಾಜ, ಕುಟುಂಬಗಳು ವಿವಾಹಪೂರ್ವ ಲೈಂಗಿಕ ಚಟುವಟಿಕೆಗಳನ್ನು ಸಹನೆಯಿಂದ ಸ್ವೀಕರಿಸಿ, ತಮ್ಮ ಮಕ್ಕಳಿಗೆ ಹೆತ್ತವರು ಮುಂಜಾಗ್ರತಾ ಕ್ರಮಗಳ ಕುರಿತು ಶಿಕ್ಷಣ ಹಾಗೂ ಪೂರ್ವ ಮಾಹಿತಿ ನೀಡುತ್ತಾರೆ. ವಿವಿಧ ರೀತಿಯ ಬ್ರೆಡ್‌ಗಳು, ಸ್ಯಾಂಡ್‌ವಿಚ್‌ಗಳು, ಆಲೂಗೆಡ್ಡೆ, ಬೀಫ್, ಕುರಿಮಾಂಸ, ಮೀನು, ಹಂದಿಮಾಂಸ ಹಾಗೂ ತರಕಾರಿಗಳು, ಹಣ್ಣುಹಂಪಲು ಅಲ್ಲಿನ ಪ್ರಮುಖ ಆಹಾರಗಳಾಗಿವೆ. ಇಲ್ಲಿನ ಹೋಟೇಲುಗಳು ಕಾರ್ಯನಿರ್ವಹಿಸುವ ಸಮಯ ಬೇರೆ ಬೇರೆಯಾಗಿರುತ್ತದೆ. ನಾನು ಪ್ರಾರಂಭದ ಕೆಲವು ದಿವಸ ಬ್ರೆಡ್ ಹಾಗೂ ಹಣ್ಣುಗಳನ್ನು ಸೇವಿಸಿ ಸುಧಾರಿಸಿಕೊಳ್ಳುತ್ತಿದ್ದೆ. ಹೋಟೇಲುಗಳಲ್ಲಿ ಹಾಲು, ಬಿಸಿ ನೀರು, ಟೀಬ್ಯಾಗ್ ಪಡೆದು ಚಹಾ ಮಾಡಿಕೊಳ್ಳುತ್ತಿದ್ದೆ. ನಂತರ ಕೆಲವು ಹಾಂಕಾಂಗ್, ಜಪಾನೀಯರ, ಚೆರ್ಚಿಯನ್ನರ, ಇಟಾಲಿಯನ್ನರ ಹೋಟೇಲುಗಳನ್ನು ಶೋಧಿಸಿ ಅಲ್ಲಿ ಹುರಿದು ಮಾಡಿದ ತರಕಾರಿ ಅನ್ನ (Veg Fried Rice) ಪಡೆದುಕೊಳ್ಳುವಲ್ಲಿ ಯಶಸ್ವಿಯಾದೆನು. ಹಾಗೆಯೇ ನನ್ನ ವಸತಿಯ ಪಕ್ಕದಲ್ಲಿ ಒಂದು ಮದ್ರಾಸ್ ಹೋಟೆಲ್ ಇರುವುದನ್ನು ಕಂಡು ಅಲ್ಲಿ ಒಂದು ದಿವಸ ಅನ್ನ, ಮೊಸರು, ಉಪ್ಪಿನ ಕಾಯಿ ಸೇವಿಸಿದ್ದರೂ ನಂತರ ಆ ಹೋಟೆಲ್ ಮಾಲಿಕರು ತಮ್ಮ ಒಂದು ವಾರದ ಯುರೋಪ್ ಪ್ರವಾಸಕ್ಕಾಗಿ ಹೋಟೆಲಿಗೆ ರಜೆ ಸಾರಿದ್ದರಿಂದ ನನಗೆ ನಂತರ, ಇತರ ಹೋಟೇಲುಗಳನ್ನು ಶೋಧಿಸಲು ಸಹಕಾರಿಯಾಯಿತು. ಅಂಗಡಿ, ಹೋಟೇಲುಗಳಲ್ಲಿ ಹಣ ಪಾವತಿಯ ಬಳಿಕ ಗಿರಾಕಿಗಳಿಗೆ ರಶೀದಿ ನೀಡುವ ವೇಳೆ ಎಷ್ಟೇ ಕೆಲಸ ಒತ್ತಡವಿದ್ದರೂ ಮಾಲಕರು ಅವರಿಗೆ ನಗುಮುಖದಿಂದ 'Thanks' ನೀಡಲು ಎಂದೂ ಮರೆಯುವುದಿಲ್ಲ. ಇಲ್ಲಿ ಯುರೋಪಿನ ಇತರ ದೇಶಗಳಿಗೆ ಆಗಾಗ್ಗೆ ಹೊರ ಸಂಚಾರ, ಪ್ರವಾಸ ಹೋಗುವುದು ಸರ್ವೇ ಸಾಮಾನ್ಯವಾದ ಸಂಗತಿಯಾಗಿದೆ.

ಗೊತೆನ್‌ಬರ್ಗ್ ನಗರದ ಹೊರವಲಯಗಳಲ್ಲಿ ಹೆಚ್ಚು ಎತ್ತರವಲ್ಲದ ದಟ್ಟವಾದ ಕಾಡುಗಳು ಮತ್ತು ಸುಂದರವಾದ ಬೆಟ್ಟಗುಡ್ಡಗಳಿವೆ. ಕಾಡುಗಳು ಸ್ಪ್ರೂಸ್ ಮತ್ತು ಪೈನ್ ಮರಗಳಿಂದ (ಸೂಜಿಮೊನೆ ಎಲೆಯ ದೇವದಾರ ಜಾತಿಯ ಮರಗಳು) ಕೂಡಿದ್ದು ಇವುಗಳ ಮಧ್ಯೆ ಕ್ರಿಸ್‌ಮಸ್ ಮರಗಳೂ ಇದ್ದವು. ನಾನು ಕ್ರಿಸ್‌ಮಸ್ ಮರಗಳನ್ನೂ ನಮ್ಮಲ್ಲಿನ ಉದ್ಯಾನಗಳಲ್ಲಷ್ಟೆ ನೋಡಿದ್ದು ಸ್ವಾಭಾವಿಕ ಕಾಡುಗಳಲ್ಲಿ ಮೊದಲು ನೋಡಿದ್ದು ಸ್ವೀಡನ್ ನಲ್ಲೇ. ಹಾಗಾಗಿ ಇಂತಹ ಕಾಡುಗಳು ನೋಡಲು ಅತ್ಯಂತ ಸುಂದರವಾಗಿದ್ದವು. ಈ ಕಾಡುಗಳ ಮಧ್ಯೆ ಕೆಲವು ಕಡೆ ನದಿ, ಸರೋವರಗಳಿಂದ ಕೂಡಿದ ಗ್ರಾಮಗಳು, ಸಣ್ಣ ಸಣ್ಣ ಉದ್ಯಮಗಳೂ ಇದ್ದವು. ಇದಕ್ಕೆ ಸಂಬಂಧಿಸಿದ ಪೇಪರ್, ಮೃದುಮರದ ಉತ್ಪಾದನಾ ಕಾರ್ಖಾನೆಗಳು ಸ್ವೀಡನ್‌ನಲ್ಲಿ ಸಾಕಷ್ಟಿವೆ. ಶೇಖಡಾ 85ರಷ್ಟು ಇಲ್ಲಿನ ಜನರು ನಗರವಾಸಿಗಳಾಗಿದ್ದು ಕೇವಲ ಶೇಖಡಾ 15ರಷ್ಟು ಜನಸಂಖ್ಯೆ ಮಾತ್ರ ಗ್ರಾಮವಾಸಿಗಳಾಗಿದ್ದಾರೆ. ನಗರ ಯೋಜನೆ, ಸಾರಿಗೆ ಮತ್ತು ಸಂಪರ್ಕಗಳಲ್ಲಿ ಗೊತೆನ್‌ಬರ್ಗ್ ದೇಶದ ಎರಡನೇ ಅತಿದೊಡ್ಡ ನಗರವಾಗಿದೆ. ಈ ನಗರವು ಸ್ವಚ್ಛತೆ, ಹಸಿರು, ಸುರಕ್ಷತೆ, ಸಮರ್ಪಕ ಯೋಜನೆಯಿಂದ ಕೂಡಿದ ರಸ್ತೆಗಳು, ಕಟ್ಟಡಗಳು, ಚರಂಡಿ, ಉತ್ತಮ ಬಸ್‌ಶಲ್ಟರ್‌ಗಳು, ಟ್ರಾಫಿಕ್ ಸಿಗ್ನಲ್‌ಗಳು, ಸೈಕಲ್ ಸವಾರರಿಗಾಗಿಯೇ ಪ್ರತ್ಯೇಕ ರಸ್ತೆಗಳು, ಪಾದಾಚಾರಿಗಳಿಗೆ ಪ್ರತ್ಯೇಕ ರಸ್ತೆಗಳು, ಸಮರ್ಪಕವಾದ ಪಾರ್ಕಿಂಗ್ ವ್ಯವಸ್ಥೆಗಳಿಗೆ ಪ್ರಸಿದ್ಧವಾಗಿದೆ. ಸಾಧಾರಣ ಎಲ್ಲಾ ವರ್ಗದ ಜನರು ಇಲ್ಲಿ ಸೈಕಲ್ ಉಪಯೋಗಿಸುತ್ತಾರೆ. ತಮಾಷೆಯಾಗಿ ಈ ನಗರವನ್ನು 'City of Cyclists' ಎಂದೂ ಹೇಳುವುದುಂಟು. ಪಾರ್ಕಿಂಗ್ ಸ್ಥಳದಲ್ಲಿ ಗಂಟೆಗಳಿಗನುಗುಣವಾಗಿ ಪಾರ್ಕಿಂಗ್ ಶುಲ್ಕವನ್ನು ಅಲ್ಲೆ ಕ್ರೆಡಿಟ್ ಕಾರ್ಡು ಅಥವಾ ನಗದು ರೂಪದಲ್ಲಿ ಪಾವತಿಸಲು ಮೆಶಿನುಗಳು ಇರುತ್ತವೆ. ಸೈಕಲ್ ಸವಾರರಿಗಾಗಿರುವ ರಸ್ತೆಯಲ್ಲಿ ಪಾದಾಚಾರಿಗಳು ನಡೆಯುವುದಿಲ್ಲ.ರ ಅಲ್ಲಿ ನಾನಿರುವ ಸಂದರ್ಭ 2-3 ಭಾರಿ ಸ್ವಲ್ಪ ಮಳೆಯೂ ಬಂದಿತು. ಮಳೆಯಾದ ಮರು ದಿವಸ ಎಲ್ಲಾ ಪಾದಾಚಾರಿ ರಸ್ತೆಗಳನ್ನು ವಾಹನಕ್ಕೆ ಜೋಡಿಸಿದ ಮೆಶಿನ್‌ನ ಮೂಲಕ ಬ್ರಶ್‌ಮಾಡಿ ಸ್ವಚ್ಛಗೊಳಿಸಿ ಎಲ್ಲಿಯೂ ಜಾರದಂತೆ ಎಚ್ಚರ ವಹಿಸುತ್ತಾರೆ. ಟ್ರಾಫಿಕ್ ಸಿಗ್ನಲ್ ಪ್ರದೇಶ ಬಿಟ್ಟು ಇನ್ನುಳಿದ ಪ್ರದೇಶಗಳಲ್ಲಿ ಪಾದಾಚಾರಿಗಳು ರಸ್ತೆ ದಾಟುವಾಗ ಅವರಿಗಾಗಿ ಕಾರು ಹಾಗೂ ಇತರೆ ವಾಹನಗಳು ನಿಂತು ಅವರಿಗೆ ರಸ್ತೆ ದಾಟಲು ಅನುವು ಮಾಡಿಕೊಟ್ಟ ನಂತರವೇ ವಾಹನಗಳು ಮುಂದೆ ಚಲಿಸುವ ಕಾನೂನು ಅಲ್ಲಿದೆ. ಹಾಗೆಯೇ ರಸ್ತೆಯ ಅಲ್ಲಲ್ಲಿ Fire Serviceನ ಸಿಬ್ಬಂದಿಯರು ಸಹಾಯ/ಸುರಕ್ಷತೆಗಾಗಿ ಸದಾ ಸೇವೆಯಲ್ಲಿರುತ್ತಾರೆ. ಗೊಟೆನ್‌ಬರ್ಗ್ ನಗರದಲ್ಲಿ ಎರಡು ವಿಮಾನ ನಿಲ್ದಾಣಗಳು, ಒಂದು ಒಪೆರಾ, 17 ವಸ್ತು ಸಂಗ್ರಹಾಲಯಗಳು, 5000 ಎಕ್ರೆಗಳ ಉದ್ಯಾನಗಳು, 25 ಥಿಯೇಟರ್‌ಗಳು, 24 ಗೋಲ್ಫ್ ಕ್ಲಬ್‌ಗಳು, 38 ಸಿನೆಮಾ ಮಂದಿರಗಳಿವೆ. ನಗರದ ಕೇಂದ್ರ ಭಾಗದಲ್ಲಿ ವಯರ್‌ಲೆಸ್ ಇಂಟರ್‌ನೆಟ್ ಸೌಲಭ್ಯವನ್ನು ಕಲ್ಪಿಸಲಾಗಿದೆ (Wireless Internet Access at Central). ಇಲ್ಲಿನ ಪ್ರಸಿದ್ಧ ಲಿಸ್‌ಬರ್ಗ್ ಮನೋರಂಜನಾ ಉದ್ಯಾನ (Liseburg Amusement Park) ನಮ್ಮ ಸಮ್ಮೇಳನದ ಸಭಾಂಗಣದ ಎದುರೇ ಇತ್ತು. ಅದಕ್ಕಾಗಿ ಬೇರೆ ಬೇರೆ ಕಡೆಯಿಂದ ಪ್ರವಾಸಿಗರು ಕುಟುಂಬ ಸಮೇತ ಬರುತ್ತಿದ್ದರು.

ನಾನು ಸಮ್ಮೇಳನದವರು ಸಂಯೋಜಿಸಿದ ಎರಡು ಪ್ರವಾಸಗಳ ಟಿಕೇಟ್‌ಗಳನ್ನು ಮೊದಲೇ ಖರೀದಿಸಿದ್ದೆ. ಒಂದು ವೋಲ್ವೊ ಅಧ್ಯಯನ ಪ್ರವಾಸ ಇನ್ನೊಂದು ಗೊಟೆಬರ್ಗ್ ನಗರ ಪ್ರವಾಸ. ಇದಕ್ಕಾಗಿ ವಿಶೇಷ ಬಸ್ಸುಗಳ ಮತ್ತು ಗೈಡ್‌ಗಳ ವ್ಯವಸ್ಥೆ ಮಾಡಿದ್ದರು. ವೋಲ್ವೊ ಕಾರ್ಖಾನೆ ಭೇಟಿಯಿಂದ ಅಲ್ಲಿನ ಕೆಲಸದ ಸಂಘಟನೆ, ಪರಿಸರ ಮತ್ತು ಸುರಕ್ಷತೆಯ ಕಾರ್ಯದ ಬಗ್ಗೆ ಕಾರ್ಖಾನೆಯು ಈ ವರೆಗೆ ಮಾಡಿದಂತಹ ಕಾರ್ಯಗಳ ಕುರಿತು ನಮಗೆ ಅನುಭವವಾಯಿತು. ಹಾಗೆಯೇ ನಗರ ಪ್ರವಾಸದಿಂದ ನಾವು ನಗರದ ಅನೇಕ ಆಕರ್ಷಣೆಗಳನ್ನು ನೋಡಿದೆವು. ಮುಖ್ಯವಾಗಿ ಗುಸ್ತಾವ್ ಅಡೋಲ್ಫ್ ಚೌಕ, ನಗರದ ಉಗಮಗಳು, ನಗರದೊಳಗಿನ ಕಾಲುವೆಗಳು, ಒಪೆರಾ ಹೌಸ್, ಬಂದರು ಪ್ರದೇಶ, ಹಳೆಯ ಮರ್ಜೋನಾ ಕಾರ್ಮಿಕರ ವಸತಿಗಳು ಮತ್ತು ಈ ಹಿಂದೆ ಬಂದರು ಕಾರ್ಮಿಕರು ಮತ್ತು ನಾವಿಕರು ವಾಸಿಸುತ್ತಿದ್ದ ಮಸ್ತುಗೆಟ್ ಪ್ರದೇಶ, ಸ್ಲಾಟ್ಸ್‌ಕೊಗೆನ್ ಪಾರ್ಕ್, ಮೀನಿನ ಬಂದರು ಮತ್ತು ಅದರ ಸ್ವಚ್ಛವಾದ ಮಾರಾಟ ಕೇಂದ್ರ, ಬ್ರಿಟಿಷರ ಗ್ರಾಮ (ಇದರ ಅತ್ಯಂತ ಹಳೆಯ ಚರ್ಚು, ಶಾಲೆ ಮತ್ತು ಆಗಿನ ರಸ್ತೆಗಳನ್ನು ಹಾಗೆಯೇ ಸ್ಮಾರಕವಾಗಿ ಉಳಿಸಿದ್ದಾರೆ) ಸ್ಟೇಡಿಯಂಗಳು, ಮರಗಳಿಂದ ರಚಿಸಿದ ಹಳೆಯ ಮನೆಗಳು (ಈಗಿನ ಮನೆಗಳಲ್ಲಿ ಬೆಂಕಿಯಿಂದ ಸುರಕ್ಷಿತವಾಗಿ ಇಡಬಹುದಾದ ಜಾಗದಲ್ಲಿ ಮಾತ್ರ ಮರಗಳನ್ನು ಉಪಯೋಗಿಸುತ್ತಾರೆ) ಮತ್ತು ಗೊಟಾಪ್ಲಾಸ್ಟೆನ್ ಚೌಕದಲ್ಲಿರುವ ಕಾರ್ಲ್‌ಮಿಲ್‌ನೆ ಅತ್ಯಂತ ಪ್ರಸಿದ್ಧ ಪೊಸಿಡಾನ್‌ನ ಪ್ರತಿಮೆ (ಗ್ರೀಕ್ ಸಮುದ್ರ ದೇವರು) ಇವುಗಳನ್ನು ನಗರ ಪ್ರವಾಸದಲ್ಲಿ ಗೈಡ್‌ನ ವಿವರಣೆ ಮತ್ತು ಮಾಹಿತಿಯೊಂದಿಗೆ ನಮಗೆ ತೋರಿಸಲಾಯಿತು.

ನಮ್ಮ ಸಮ್ಮೇಳನದ ಮುಖ್ಯ ವಿಷಯವು "Sociology on the move" ಎಂದರೆ ಸಮಾಜ ಶಾಸ್ತ್ರದ ಹೊಸ ವಿಧಾನಗಳಿಂದ ಶೋಧಿಸಿ, ಶ್ರೀಮಂತ ಪರಂಪರೆಯನ್ನು ಪುನರ್ ಮೌಲ್ಯೀಕರಿಸಿ, ಸಂಶೋಧನೆಯ ನಾವಿನ್ಯ ಉದ್ದೇಶಗಳನ್ನು ನಿರೂಪಿಸಿ, ಸಮಾಜಶಾಸ್ತ್ರವು ನಮ್ಮ ಜಗತ್ತನ್ನು ಅರ್ಥೈಸಲು ಕೊಡುಗೆ ನೀಡುವುದು ಎಂಬುವುದಾಗಿದೆ. ಸ್ವೀಡನ್‌ನಲ್ಲಿ ಒಂಬತ್ತು ವಿಶ್ವವಿದ್ಯಾ ನಿಲಯಗಳಲ್ಲಿಯೂ ಮತ್ತು ಹೆಚ್ಚಿನೆ ಎಲ್ಲಾ ಕಾಲೇಜುಗಳಲ್ಲಿ ಪದವಿಮಟ್ಟದಲ್ಲಿ ಸಮಾಜ ಶಾಸ್ತ್ರವನ್ನು ಬೋಧಿಸಲಾಗುತ್ತಿದೆ. ಹಾಗೆಯೇ ಎಲ್ಲಾ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ, ಹಾಗೆಯೇ ಅಲ್ಲಿನ ಸಾಮಾಜಿಕ ಯೋಜನೆ ಮತ್ತು ಮೌಲ್ಯೀಕರಣಕ್ಕೆ ಸಂಬಂಧಿಸಿದ ನಿಯೋಗಗಳಲ್ಲಿ ಸಮಾಜಶಾಸ್ತ್ರೀಯ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಗೊಟೆಬರ್ಗ್ ವಿಶ್ವವಿದ್ಯಾನಿಲಯದ ಸಮಾಜ ಶಾಸ್ತ್ರ ಪ್ರೊಫೆಸರ್ ಶ್ರೀಮತಿ ಉಲ್ಲಾ ಜೋನ್‌ಬರ್ಗ್ ಅವರು ಸ್ವೀಡಿಶ್ ಸಮಾಜಶಾಸ್ತ್ರದ ಓರ್ವ ಪ್ರಮುಖ ವ್ಯಕ್ತಿ ಹಾಗೂ ಸಮ್ಮೇಳನದ ಸಂಘಟನೆಯಲ್ಲೂ ಪ್ರಮುಖರಾಗಿದ್ದರು. ಅಂತಾರಾಷ್ಟ್ರೀಯ ಸಮಾಜಶಾಸ್ತ್ರ ಸಂಘದ ಅಧ್ಯಕ್ಷರಾದ ಪ್ರೊ। ಮೈಕೆಲ್ ವಿರಿಯೋರ್ಕಾ ಅವರ ಅಧ್ಯಕ್ಷೀಯ ಗೋಷ್ಠಿಯ ಉಪನ್ಯಾಸವನ್ನು ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲೂ ಹಂಚಿದ್ದರು.

ನಾನು ಸಮ್ಮೇಳನದಲ್ಲಿ ಹಾಜರಿದ್ದ ಸಂದರ್ಭ ಇಂಗ್ಲೆಂಡ್‌ನ ಪ್ರೊಕ್ವೆಸ್ಟ್ ಪ್ರಕಾಶಕರು ಏರ್ಪಡಿಸಿದ ಒಂದು ಸಭೆಗೂ ಭಾಗವಹಿಸಲು ನನಗೆ ಆಹ್ವಾನ ಸಿಕ್ಕಿತ್ತು. ಅವರ ಪತ್ರಿಕೆ, ಪುಸ್ತಕಗಳ ಪ್ರಕಾಶನ ಮತ್ತು ಮಾರಾಟದ ಕುರಿತು ಅಲ್ಲಿ ಉಪಯುಕ್ತ ಚರ್ಚೆಗಳು ನಡೆದವು ಹಾಗೂ ನಮ್ಮ ಸಲಹೆ ಸೂಚನೆಗಳನ್ನು ದಾಖಲಿಸಿಕೊಂಡರು. ಇದೇ ರೀತಿ ಈ ಹಿಂದೆ ನನಗೆ ಜಮ್ಮು ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲೂ ಸೇಜ್ ಪ್ರಕಾಶಕರು ಮತ್ತು ನಮ್ಮ ಸಂಶೋಧನಾ ಸಮಿತಿ ಜಂಟಿಯಾಗಿ ನಡೆಸಿದ ಒಂದು ಸಭೆಯಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿ ಪ್ರಕಾಶನಕ್ಕೆ ಸಂಬಂಧಿಸಿದ ನಾನು ನೀಡಿದ ಕೆಲವು ಸಲಹೆ, ಸೂಚನೆಗಳು, ಸ್ಪಷ್ಟೀಕರಣಗಳಿಂದಾಗಿ ನಂತರ ನನ್ನನ್ನು ರಾಷ್ಟ್ರೀಯ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯನನ್ನಾಗಿ ನೇಮಿಸಿದ್ದ ವಿಚಾರ ಇಲ್ಲಿ ಜ್ಞಾಪಕಕ್ಕೆ ಬಂತು.

ಸಮ್ಮೇಳನದ ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸುವ ಮಧ್ಯೆ ಬಿಡುವು ಸಿಕ್ಕಾಗೆಲ್ಲಾ ಒಟ್ಟು ಒಂಬತ್ತು ಸ್ವೀಡನ್ ದೇಶದ ಪ್ರಜೆಗಳನ್ನು ನಾನು ಸಂದರ್ಶನ ನಡೆಸಿ ಸ್ವೀಡನ್ ಸಮಾಜ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ದಾಖಲಿಸಿಕೊಂಡಿದ್ದೆ, ಈ ಮಾಹಿತಿದಾರರಲ್ಲಿ ಒಬ್ಬರು ಪ್ರೊಕ್ವೆಸ್ಟ್ ಪ್ರಕಾಶನದ ಸ್ವೀಡನ್‌ನ ಪ್ರತಿನಿಧಿ ಇಬ್ಬರು ಸಮ್ಮೇಳನದ ಪ್ರವಾಸ ಮತ್ತು ಸಾರಿಗೆ ವಿಭಾಗಗಳ ಸ್ವಾಗತಗಾರ್ತಿಯರು ಮತ್ತು ಇನ್ನುಳಿದವರು ಆ ದೇಶದ ಸಮ್ಮೇಳನದ ಪ್ರತಿನಿಧಿಗಳಾಗಿದ್ದರು. ತಾ.18ರಂದು ಬೆಳಿಗ್ಗೆ ಗೊಟೆಬರ್ಗ್‌ನ ಲ್ಯಾಂಡ್‌ವೆಟರ್ ವಿಮಾನ ನಿಲ್ದಾಣದಿಂದ ಲುಫ್ತಾಂಝ ವಿಮಾನದ ಮೂಲಕ ಜರ್ಮನಿಯ ಮ್ಯೂನಿಚ್ ಮಾರ್ಗವಾಗಿ ಮುಂಬೈ ತಲುಪಿ ಅಲ್ಲಿಂದ ಏರ್ ಇಂಡಿಯಾ ವಿಮಾನದ ಮೂಲಕ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದು ನನ್ನ ಊರು ತಲುಪಿದೆನು. ನನ್ನ ಹೋಗುವ ಮತ್ತು ಹಿಂದಿರುಗುವ ಪ್ರಯಾಣದ ಮಧ್ಯೆ ಜರ್ಮನಿಯಲ್ಲಿ ಒಟ್ಟು 7 ಗಂಟೆಗಳ ಕಾಲ ಕಳೆದುದು ಕೂಡಾ ಒಂದು ಹೊಸ ಅನುಭವವೇ. ಈ ಎಲ್ಲಾ ಅನುಭವದ ಜೊತೆ ಸ್ವೀಡನ್ ಸಮ್ಮೇಳನದ ಪ್ರತಿನಿಧಿಗಳು ಹಾಗೂ ವಿಮಾನ ಸಹಪ್ರಯಾಣಿಕರಲ್ಲಿ ಅನೇಕರು ನನ್ನ ಸ್ನೇಹಿತರಾಗಿದ್ದು ಅವರೆಲ್ಲರ ಸಂಬಂಧಗಳು ಮುಂದುವರಿಯುತ್ತಿದ್ದಂತೆ ಸ್ವೀಡನ್‌ನಲ್ಲಿ ಕಳೆದ ದಿನಗಳ ನೆನಪುಗಳು ಇನ್ನೂ ಹಸಿರಾಗಿದೆ.

ಮೆಕ್ಸಿಕೋ ಸಹೋದ್ಯೋಗಿಯೊಂದಿಗೆ ವೋಲ್ವೊ ಕಂಪೆನಿಯಲ್ಲಿ





ನಗರದ ಪ್ರಸಿದ್ಧ ಪ್ರವಾಸಿ ಆಕರ್ಷಕ ಪೊಸಿಡಾನ್ ಪ್ರತಿಮೆ



ಇತರ ದೇಶದ ಸಹ ಪ್ರಬಂಧ ಮಂಡನೆಗಾರರೊಂದಿಗೆ ಹ್ಯಾಂಡಲ್ಸ್‌ನಲ್ಲಿ




ನಾನು ಪ್ರಬಂಧ ಮಂಡನೆ ಮಾಡಿದ ಗೊಟೆಬರ್ಗ್ ವಿ.ವಿ.ಯ ಹ್ಯಾಂಡಲ್ಸ್-ಭಾರತೀಯ ಪ್ರತಿನಿಧಿಗಳೊಂದಿಗೆ



ಗೊಟೆಬರ್ಗ್‌ನಲ್ಲಿರುವ ಅತ್ಯಂತ ಪ್ರಾಚೀನ ಇಗರ್ಜಿ

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

47. ಸಿತಬೆಟ್ಟು ಶಿಲಾಲೇಖನಗಳ ಪೈಕಿ ಒಂದರಲ್ಲಿ (ಕ್ರಿ.ಶ.1468) ಮರಿಅರಮನೆಯ ರಾಮರಸನ ಗೃಹಾಧಿಕಾರಿಯಾದ ಅಪ್ಪರಸನು ಸಿಹತಿಯ ಭೈರವ ದೇವಸ್ಥಾನದ ಸ್ಥಾನಿಕ ಪುರೋಹಿತನಾದ ಬಾಯಿರಯ್ಯನಿಗೆ ಮೂರು ಹೊನ್ನು ಮತ್ತು ಮೂರು ಪಣಗಳನ್ನು ತೀರ್ಥಹಳ್ಳಿಯ ಪುಲಿನಾಡಿನ ತೀರ್ವೆಯಿಂದ ಕೊಡುವಂತೆ ವ್ಯವಸ್ಥೆ ಮಾಡಿದ ದಾಖಲೆ ಇದೆ.

48. ಗುಬ್ಬಿ ತಾಲೂಕಿನ ಕಲ್ಲೂರು ಹೋಬಳಿಯಲ್ಲಿ ಕಪುಲೆ ಸಿದ್ಧಮಲ್ಲಿಕಾರ್ಜುನ ದೇವಾಲಯವಿದೆ. ವಿಜಯನಗರದ ಅರಸನಾದ ವಿರೂಪಾಕ್ಷ ಮಹಾರಾಯನ ಕಾಲದಲ್ಲಿ ಕ್ರಿ.ಶ.1470ರಲ್ಲಿ ಈ ದೇಗುಲದ ಸ್ಥಾನಿಕ ಪುರೋಹಿತನು ಸೋಮಯ್ಯ ದೇವನಾಗಿದ್ದನು.

49. ಕರ್ನೂಲು ಜಿಲ್ಲೆಯ ನಂದ್ಯಾಲ ತಾಲೂಕಿನ ಅಹೋಬಲಮ್ ಎಂಬ ಸುಪ್ರಸಿದ್ಧ ವೈಷ್ಣವ ದೇಗುಲದ ಅಧಿಕಾರವು (ಆಡಳಿತೆಯು) ಕೃಷ್ಣದೇವರಾಯನ ಕಾಲದಲ್ಲಿ ಸ್ಥಾನಿಕರ ಕೈಯಲ್ಲಿತ್ತು. ಈ ವಿಷಯವು ಕ್ರ.ಶ.1503ರ ಲೇಖದಿಂದ ಸ್ಪಷ್ಟವಾಗುತ್ತದೆ. ಅದರ ಪ್ರಕಾರ ವಿಜಯನಗರ ಅರಸನಾದ ಇಮ್ಮಡಿ ನರಸಿಂಗ ಮಹಾರಾಯನು ತನ್ನ ಮತ್ತು ನರಸನಾಯಕನ ಗೌರವಕ್ಕೋಸ್ಕರ ಪಾಣಿಕೇಶ್ವರ ದೇವಸ್ಥಾನದ ನಾಲ್ಕು ಸ್ಥಾನಿಕರಿಗೆ ಆ ದೇಗುಲದ ಪೂಜಾದಿ ವಿನಿಯೋಗಗಳನ್ನು ನಡೆಸುವರೆ ದಾನವಾಗಿ ಕೊಟ್ಟನು.

50. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಪ್ರಸಿದ್ಧವಾದ ಕದ್ರೆ ಮಂಜುನಾಥ ದೇವಾಲಯವಿದೆ. ಈ ದೇವಸ್ಥಾನದ ಆಡಳಿತ ಮುಕ್ತೇಸರರೂ, ಪುರೋಹಿತ ವರ್ಗದವರೂ ಸ್ಥಾನಿಕರಾಗಿದ್ದರು. ಕ್ರಿ.ಶ.1475ರ ಶಿಲಾಶಾಸನವು ಈ ಸಂಗತಿಯನ್ನು ರುಜುಪಡಿಸುತ್ತದೆ. ಈ ಲೇಖವು ಕೆಳಗಿನ ವಿಷಯಗಳನ್ನು ತಿಳಿಸುತ್ತದೆ. ವಿಜಯನಗರ ಅರಸನಾದ ವಿರೂಪಾಕ್ಷದೇವನ ಮಹಾಪ್ರಧಾನನಾದ ಸಿಂಗಣ್ಣದಂಡ ನಾಯಕ ಸಾಮ್ರಾಜ್ಯ ಆಡಳಿತವನ್ನು ನಡೆಸಿಕೊಂಡಿರುವಾಗ ತುಳುವದ ಬಾರಕೂರು ರಾಜ್ಯವನ್ನು ವಿತ್ತರಸ ಒಡೆಯನು ಆಳುತ್ತಿದ್ದನು. ಸ್ಥಳೀಯ ಆಡಳಿತೆಯು ಚೌಟರ ಮತ್ತು ಬಂಗರ ಅಧೀನವಿತ್ತು. ಅದರ ನಾಲ್ಕು ಸ್ಥಾನಿಕರಾದ ರವಾಳಪಳಿ, ಗಣಪಣ್ಣಆಳುವ, ರಾಯರ ಸೇನಿ ಬೋವ ಮತ್ತು ಗೊಮ್ಮಸೇನ ಬೋವರು ಒಟ್ಟಾಗಿ ಒಪ್ಪಿಕೊಂಡು ಮಂಗಳನಾಥ ಒಡೆಯನಿಗೆ ಒಂದು ಆಸ್ತಿಯವಿಕ್ರಯ ಮಾಡಿದರು.

51. ಕ್ರಿ.ಶ.1407ರ ಮೂಳ್ಬಾಗಲ್ ತಾಲೂಕಿನ ವಾಣಿಕ ವಾಣಿಗನ ಹಳ್ಳಿಯ ಶಾಸನ ಒಂದರಲ್ಲಿ ಲತ್ತನೂರು ಮಡವಾಳದ ಗೌರೀದೇವಸ್ಥಾನದ ಸ್ಥಾನಿಕರ ಆಸ್ತಿ ಸಂಬಂಧವಾದ ಉಲ್ಲೇಖವಿದೆ.

52. ಮೂಳಬ್ಗಲ್ ರಾಜ್ಯದ ಅಧಿಕಾರವು ಪ್ರಧಾನ ನಾಗಣ್ಣ ಒಡೆಯರ ಕೈಯಲ್ಲಿರುವಾಗ ಕ್ರಿ.ಶ.1416ರ ಶಿಲಾಲೇಖದಲ್ಲಿ ಮುಳುವಾಯಿ ನಾಚಿದೇವಿಯ ಅಪ್ಪಣೆ ಮೇರೆಗೆ, ಆ ದೇವರ ಸ್ಥಾನಿಕರಾದ ಕೇಶವ ಪೆರುಮಾಳೆ ಎಂಬವರ ಮಗ ಬಲಿಪ, ಮಣಿಯ ಮತ್ತು ಮಾರಪ್ಪ ಎಂಬವರೂ ಮತ್ತು ಕೇಶವನ ಸಹೋದರನಾದ ಆವಂಬಳನೂ ಸೇರಿ ಶಿವರಾತ್ರಿ ಮಿತ್ತಣ್ಣ, ಮಲ್ಲಣ್ಣ, ಮತ್ತು ಇತರ ಬ್ರಾಹ್ಮಣರಿಗೆ ಶಾಸನ ಬರೆದ ದಾಖಲೆ ಇದೆ. ಅಂತೆಯೇ ಕ್ರಿ.ಶ.1482ರಲ್ಲಿ ಕೋಲಾರ ತಾಲೂಕಿನ ಕೇಶವ ವಿನಾಯಕನ ಹಳ್ಳಿಯಲ್ಲಿ ದೊರೆತ ಶಾಸನವು ಇಂತಹ ದಾನವನ್ನು ಭೈರವ ದೇವರ ಸ್ಥಾನಿಕರು ಮಾಡಿದುದು ಕಂಡು ಬರುತ್ತದೆ. ಮೂಳ್ಬಾಗಲ್ ತಾಲೂಕಿನ ರಾಯಗುಂಡ ಹಳ್ಳಿಯ ಇನ್ನೊಂದು ಶಿಲಾಲೇಖದಿಂದ ಸಾರ್ವಜನಿಕ ಉದ್ದೇಶದ ಬಗ್ಗೆ ಕೊಂಡಪ್ಪ ತಿಮ್ಮಣ್ಣ ಮಗ, ಹಾಗೂ ನರಸಿಂಹ ದೇವಸ್ಥಾನದ ಸ್ಥಾನಿಕನಾದ ದೇವಪ್ಪ ಎಂಬಾತನು ಮಾಡಿದ ದಾನಶಾಸನವಿದೆ (1496 ಕ್ರಿ.ಶ.).

53. ಸ್ಥಾನಿಕರು ಸಾರ್ವಜನಿಕ ದಾಖಲೆಗೆ ಸಾಕ್ಷಿಯಾಗಿ ನಿಂತ ಅನೇಕ ಉದಾಹರಣೆಗಳಿವೆ. ಕ್ರಿ.ಶ.1423ರಲ್ಲಿ ತಿಪ್ಪೆ ಸೆಟ್ಟಿ ಎಂಬಾತನು ಕಟ್ಟಿಸಿದ ಕೆರೆಯನ್ನು ಹುಣ್ಸೂರು ತಾಲೂಕಿನ ದೊಡ್ಡ ಬೆಳಹಾಳಿನ ಈಶ್ವರಾಲಯದ ತಿರುಮಲ ದೇವರಿಗೆ ಬಿಟ್ಟುಕೊಡುವಾಗ ವೈದಿಕ ಬ್ರಾಹ್ಮಣರು, ದೇಗುಲ ಸ್ಥಾನಿಕರೂ, ನಂಬಿಯರೂ, ತಿರುಮಲ ದೇವರ ಚಾಕರಿಯವರೂ ಸಾಕ್ಷಿಗಳಾಗಿ ಅವರ ಸಮಕ್ಷಮ ದಾನ ಮಾಡಿಲಾಯಿತು.

54. ಕ್ರಿ.ಶ.1406ರ ವಿಜಯನಗರ ದೇವರಾಯನ ಶಾಸನ ಪ್ರಕಾರ ಕೋಲಾರು ತಾಲೂಕಿನ, ಬೆಳ್ಳೂರಿನ ಕಣ್ಣೇಶ್ವರದ ದೇವಾಲಯದ ಸ್ಥಾನಿಕರಿಗೆ, ಯಾವ ವಿಶೇಷ ಹಕ್ಕುಗಳೂ, ಅಧಿಕಾರಿಗಳೂ ಇದ್ದುವೆಂದು ತಿಳಿದು ಬರುತ್ತದೆ.

55. ಸ್ಥಾನದ ಭೂಮಿಯು ಸ್ಥಾನಿಕರ ವಶವಿರುವುದು ದಾಖಲೆಯಿಂದ ತಿಳಿದು ಬರುತ್ತದೆ. ಕ್ರಿ.ಶ.1420ರ ಮೈಸೂರಿನ ಸಿದರವಳ್ಳಿಯ ಸೋಮೇಶ್ವರ ದೇವಾಲಯದ ಲೇಖದಲ್ಲಿ ಸ್ಥಾನಿಕರಾದ ರಯಡೆ, ಸೋಮಯಡೆ ಮತ್ತು ಕೇತಡೆ, ಎಂಬವರ ಸ್ವಾಧೀನವಿದ್ದುದು ಖಚಿತವಾಗಿದೆ.

56. ಅಂತೆಯೇ ಇಮ್ಮಡಿ ನರಸಿಂಹರಾಯನು ಕ್ರಿ.ಶ.1495ರಲ್ಲಿ ಕೆತ್ತಿಸಿದ ಶಾಸನದಲ್ಲಿ ಭೈರವ ದೇವರ ಸ್ಥಾನಿಕರಿಗೆ ಮಾಡಿದ ಭೂದಾನ ಕಂಡು ಬರುತ್ತದೆ.

57. ಸ್ಥಾನಿಕ ನಾಡಾಂಡಜೀಯನು ಮೈಸೂರು ರಾಜ್ಯದ ಚಿಂತಾಮಣಿ ತಾಲೂಕಿನ ಭೀಮೇಶ್ವರ ದೇಗುಲದ ಅರ್ಚಕನಾಗಿದ್ದುದು ಕ್ರಿ.ಶ.1500ರ ಲೇಖದಿಂದ ತಿಳಿದು ಬರುತ್ತದೆ. ಅಂತೆಯೇ ತೆಂಕಲ್ಲೀವೆ ಶ್ರೀ ದೇವರ ಸ್ಥಾನಿಕನಾದ ನಯನಾರಯ್ಯನು ದೇವಾಲಯದ ಅರ್ಚಕನಾಗಿದ್ದನು. ಈನಯನಾರಯ್ಯನು ಸೋಮಯ ಮತ್ತು ರಾಮಯ ಲಿಂಗದೇವರ ಸ್ಥಾನಿಕನಾಗಿಯೂ ಇದ್ದನು.

58. ಕೆರೆಗ ತಿಮ್ಮರಸನಿಗೆ ವಿಜಯನಗರದ ಅರಸನು ಕ್ರಿ.ಶ.1532ರಲ್ಲಿ ಧರ್ಮೇಶ್ವರ ದೇವರ ಮತ್ತು ಬಲಿಮೂರ್ತಿ ಚಂದ್ರಶೇಖರ ದೇವರ ವಿನಿಯೋಗಕ್ಕೋಸುಗ ಒಗರ ಹಳ್ಳಯನ್ನು ಕೊಟ್ಟಿದ್ದು ಆತನು ಈ ಇಡೀ ದತ್ತಿಯನ್ನು ಸ್ಥಾನಿಕ ಅರ್ಚಕರಾದ ದೇವರು ಭಟ್ಟರ ವಶ ವಿವರಿಸಿದ ದಾಖಲೆ ಇದೆ. ಈ ಶೀಲಾಲೇಖವು ಹಾಸನ ತಾಲೂಕಿನ ಗ್ರಾಮ ಎಂಬಲ್ಲಿಯ ಧರ್ಮೇಶ್ವರ ದೇವಾಲಯದಲ್ಲಿ ದೊರಕಿದೆ.

59. ಭಟ್ಟ ವೃತ್ತಿಯನ್ನು ಸ್ಥಾನಿಕರು ಪಡೆದ ದೃಷ್ಟಾಂತಗಳೂ ಲಿಖಿತವಾಗಿದೆ. ಮೂಳ್ಬಾಗಲ್ ಸೋಮೇಶ್ವರ ದೇವರಸ್ಥಾನಿಕರು ಸದಾಶಿವರಾಯನ ಕಾಲದಲ್ಲಿ ಭಟ್ಟ ವೃತ್ತಿಯನ್ನು ಪಡೆದವರಾಗಿದ್ದು ದೇಗುವಲ ಅರ್ಚಕರಾಗಿದ್ದರು.

60. ಸ್ಥಾನಿಕರಿಗೆ ದಾನ ಯಾ ಉಂಬಳಿಯನ್ನು ಕೊಟ್ಟ ಕಾರಣವನ್ನು ಕ್ರಿ.ಶ.1562ರ ಹಾಸನ ತಾಲೂಕಿನ ಕುದಿರಿಗುಂಡಿಯ ಶಾಸನದಿಂದ ತಿಳಿಯಬಹುದು. ಅದರಲ್ಲಿ ಸ್ಥಾನಿಕರಿಗೆ ಮಾಡಿದುದು ಧರ್ಮ ಶಾಸನವೆಂದೂ, ದೇವರಿಗೆ ಮಧ್ಯಾಹ್ನ ಮತ್ತು ಸಂಜೆ ನೈವೇದ್ಯದ ಏರ್ಪಾಡು ಮಾಡಬೇಕೆಂದೂ ಇತರ ಸೇವಾದಿಗಳನ್ನು ನಡೆಸಬೇಕೆಂದೂ ಅವರ ಕರ್ತವ್ಯವನ್ನು ನಿರೂಪಿಸಿದೆ.

(ಮುಂದುವರಿಯುವುದು)

# ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ

- ಡಾ। ಎಚ್.ವಿ.ನರಸಿಂಹಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ...)

ಅಷ್ಟಮಂಗಲಪ್ರಶ್ನೆಯಲ್ಲಿ ಕಂಡು ಬಂದಂತೆ 2002ರಲ್ಲಿ ಶ್ರೀಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರೀ ಮೂಕಾಂಬಿಕೆಯ ಅಷ್ಟಬಂಧ-ಬ್ರಹ್ಮಕಲಶೋತ್ಸವಾದಿಗಳು ನಡೆದಿದ್ದು, ಏಪ್ರಿಲ್ 27ರಂದು ಜಗದ್ಗುರುಗಳವರು ತಮ್ಮ ಅಮೃತ ಹಸ್ತದಿಂದ ಶ್ರೀಮೂಕಾಂಬಿಕೆಗೆ ಕುಂಭಾಭಿಷೇಕ ನೆರವೇರಿಸಿದ್ದಾರೆ. ಇದೇ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಶ್ರೀಕ್ಷೇತ್ರ ಕೊಲ್ಲೂರಿನ ಅತ್ಯಾಕರ್ಷಕ ಪ್ರವೇಶ ದ್ವಾರವನ್ನು ಪರಮಪೂಜ್ಯ ಜಗದ್ಗುರುಗಳವರು ಉದ್ಘಾಟಿಸಿರುತ್ತಾರೆ. 2005ರ ಫೆಬ್ರವರಿ 14ರ ಜಗದ್ಗುರು ಮಹಾಸ್ವಾಮಿಗಳವರು ಕೋಟ್ಯಂತರ ರೂಪಾಯಿ ಬೆಲೆಬಾಳುವ ಅತ್ಯಮೂಲ್ಯವಾದ ಸ್ವರ್ಣರಥವನ್ನು ದೇವಿ ಮೂಕಾಂಬಿಕೆಗೆ ತಮ್ಮ ಪವಿತ್ರ ಹಸ್ತಗಳಿಂದ ಸಮರ್ಪಿಸಿದ್ದಾರೆ.

**ಪೇಜಾವರ ಮಠದ ಸಂಬಂಧ**

ಶೃಂಗೇರಿ ಮಠ ಮತ್ತು ಉಡುಪಿಯ ಪೇಜಾವರ ಮಠಗಳು ಭಿನ್ನ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರೂ ಆ ಮಠಗಳ ನಡುವೆ ಸೌಹಾರ್ದಯುತ ಸಂಬಂಧವಿತ್ತೆಂಬುದು ಗಮನಾರ್ಹ. ಪೇಜಾವರ ಮಠದ ಶ್ರೀ ಮದ್ವಿಶ್ವವರ್ಯತೀರ್ಥ ಶ್ರೀಪಾದಂಗಳವರು ಶಾಲಿವಾಹನ ಶಕ 1762ರ ಪ್ಲವ ಸಂವತ್ಸರದಲ್ಲಿ (ಕ್ರಿ.ಶ.1841) ಗಂಧಪ್ರಸಾದ ಮಂತ್ರಾಕ್ಷತೆಗಳನ್ನು ಸ್ವೀಕರಿಸುವಂತೆ ಶೃಂಗೇರಿ ಶ್ರೀಶಾರದಾ ಪೀಠದ ಸುಬೇದಾರ ಪುಟ್ಟರಾಯರಿಗೆ ಪತ್ರಬರೆದರು. ಉಡುಪಿಯ ಶ್ರೀ ಕೃಷ್ಣನ ಪೂಜಾ ಪರ್ಯಾಯಕ್ಕೆ ಶೃಂಗೇರಿ ಜಗದ್ಗುರುಗಳು (ಅಷ್ಟಮ ನರಸಿಂಹ ಭಾರತೀ ಸ್ವಾಮಿಗಳವರು) ಬರುವ ಏರ್ಪಾಟು ಮಾಡಬೇಕೆಂದು ಪೇಜಾವರ ಸ್ವಾಮಿಗಳು ಪುಟ್ಟರಾಯರನ್ನು ವಿನಂತಿಸಿಕೊಂಡರು. ಈ ವಿಷಯ ಕಡತದ ದಾಖಲೆಯೊಂದರಿಂದ ಸ್ಪಷ್ಟವಾಗುತ್ತದೆ.

*"ನಾವು ಯಿಲಿ ಮಾಡಿಬರ್‍ರುವ ಶ್ರೀಕೃಷ್ಣದೇವರ್‍ರ ಪೂಜಾ ಪರ್‍ರ್ಯಾಯಾ ಕಾಲದಲ್ಲಿ ಶ್ರೀಸ್ವಾಮಿಗಳವರ ಕರಶಿಕೊಂಡು ಶ್ರೀದೇವರ ಸಂದರ್ಶನಾದಿಗಳ ಮಾಡಿಸಿ, ಅವರ ಭೆಟ್ಟಿಯು ನಮಗೆ ಲಭ್ಯ ಆಗಬೇಕೆಂಬುದಾಗಿ ಬಹಳ ಅಪೇಕ್ಷೆಯಿರ್‍ರುವ ಪ್ರಯುಕ್ತ ನಮ್ಮ ಅಪೇಕ್ಷೆ ಪೂರ್ನಾ ಆಗುವಗೋಸ್ಕರ್‍ರ ಶ್ರೀಸ್ವಾಮಿಗಳವರ್‍ರಿಗೆ ಯಾವ ಪ್ರಕಾರ್ರ ಅರಿಕೆ ಮಾಡಬೇಕೋ ಆ ಪ್ರಕಾರ ಮಾಡಿ ಬರ್‍ರ್ರುವ ಕಾರ್ತಿಕ ಮೊಹತ್ಸವಕ್ಕೆ ಕರಕೊಂಡು ಬಂದು ಮೇಲೆ ಬರೆದ ಪ್ರಕಾರ್‍ರಾ ಶ್ರೀದೇವರ ಸಂದರ್ಶನಾದಿಗಳಾ ಮಾಡಿಕೊಂಡು ನಮಗೂ ಭೆಟ್ಟಿ ಲಾಭ ಕೊಟ್ಟು ಮನಃ ಸಂತೋಷ ಬಡಿಸಿ ನಿಲು ಪ್ರಸಾದ ಮಂತ್ರಾಕ್ಷತೆ ತೆಗೆದುಕೊಂಡು ಹೋಗುವಂತ್ತೆ ಮಾಡ್ಸಬೇಕು"*

(ಕಔ೭.ದಾ೩೫)

ಉಡುಪಿಯ ಪೇಜಾವರ ಸ್ವಾಮಿಗಳು ಶೃಂಗೇರಿ ಜಗದ್ಗುರುಗಳನ್ನು ಕಾಣಲು ಬಹಳ ಉತ್ಸುಕರಾಗಿದ್ದರೆಂದು ಈ ಮೇಲಿನ ಪತ್ರದಿಂದ ಸ್ಪಷ್ಟವಾಗುತ್ತದೆ. ಎರಡೂ ಮಠಗಳ ನಡುವಣ ಸಂಬಂಧವು ಸೌಹಾರ್ದಯುತವಾಗಿತ್ತೆಂಬುದಕ್ಕೆ ಇದೊಂದು ನಿದರ್ಶನ. ಈ ಸೌಹಾದಯುತ ಸಂಬಂಧವು ಇಂದಿಗೂ ಮುಂದುವರಿಯುತ್ತಿದೆ ಎಂಬುದು ಗಮನಾರ್ಹ.

1976ರಲ್ಲಿ ಶೃಂಗೇರಿ ಶ್ರೀಶಾರದಾ ಪೀಠದ ಉಭಯ ಜಗದ್ಗುರುಗಳವರು ಉಡುಪಿಯ ಚಿಟ್ಪಾಡಿಯ ಶ್ರೀಶಾರದಾಂಬೆಯ ಪ್ರತಿಷ್ಠೆ ಮಾಡಲು ಆಗಮಿಸಿ, ಮಣಿಪಾಲದಲ್ಲಿ ಮೊಕ್ಕಾಂ ಮಾಡಿದಾಗ, ಪೇಜಾವರ ಮಠದ ಈಗಿನ ಪೀಠಾಧಿಪತಿ ಶ್ರೀ ವಿಶ್ವೇಶತೀರ್ಥರು ಸ್ವತಹ ಮಣಿಪಾಲಕ್ಕೆ ಬಂದು, ಜಗದ್ಗುರುಗಳವರನ್ನು ಶ್ರೀಕೃಷ್ಣದೇವರ ದರ್ಶನಕ್ಕೆ ದಯಮಾಡಿಸಬೇಕೆಂದು ಆಹ್ವಾನಿಸಿದರು. ಈ ಆಹ್ವಾನವನ್ನು ಮಾನ್ಯಮಾಡಿ ಜಗದ್ಗುರುಗಳವರು ಉಡುಪಿಗೆ ಚಿತ್ತೈಸಿ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಸ್ಥಾನಗಳಿಗೆ ಹೋಗಿ, ಶ್ರೀದೇವರ ದರ್ಶನ ಮಾಡಿ, ಉಡುಪಿ ಶ್ರೀಕೃಷ್ಣಮಠಕ್ಕೆ ಭೇಟಿ ನೀಡಿದಾಗ ಅವರನ್ನು ಸಂಭ್ರಮದಿಂದ ಸ್ವಾಗತಿಸಿ, ಶ್ರೀಕೃಷ್ಣದರ್ಶನ ಮಾಡಿಸಿ, ಗೌರವಿಸಿದ್ದರು. 1980ರಲ್ಲಿ ಶ್ರೀ ಭಾರತೀ ತೀರ್ಥ ಸನ್ನಿಧಾನಂಗಳವರು ಗೋಕರ್ಣದಲ್ಲಿ ಮೊಕ್ಕಾಂ ಮಾಡಿದಾಗ, ಅವರು ಕಾಲಟಿಗೆ ತೆರಳುವ ಮಾರ್ಗದಲ್ಲಿ ಉಡುಪಿಯ ಬಳಿ ಕೊಡವೂರಿನಲ್ಲಿ ಒಂದು ರಾತ್ರಿ ವಾಸ್ತವ್ಯ ಮಾಡುತ್ತಾರೆಂಬ ವಿಚಾರ ತಿಳಿದು, ಪೇಜಾವರ ಸ್ವಾಮಿಗಳವರು ಶ್ರೀಶಾಚಾರ್ಯರೆಂಬ ತಮ್ಮ ಪ್ರತಿನಿಧಿಯನ್ನು ಈ ಲೇಖಕನ ಜತೆಗೆ ಗೋಕರ್ಣಕ್ಕೆ ಕಳುಹಿಸಿ, ಶ್ರೀ ಸನ್ನಿಧಾನಂಗಳವರನ್ನು ಆಹ್ವಾನಿಸಿದರು. ಸ್ವಾಮಿಗಳವರ ಸೌಜನ್ಯಕ್ಕೆ ಮನ್ನಣೆ ನೀಡಿ, ಆಗಮಿಸಿದ ಶ್ರೀ ಸನ್ನಿಧಾನಂಗಳವರನ್ನು ಪೇಜಾವರ ಶ್ರೀಗಳು ಗೌರವಪೂರ್ವಕ ಸ್ವಾಗತಿಸಿ, ಸತ್ಕಾರ ಮಾಡಿ ಬೀಳ್ಕೊಟ್ಟಿದ್ದರು. ಮಗದೊಮ್ಮೆ 2007ರ ಡಿಸೆಂಬರ್‌ನಲ್ಲಿ ಪೇಜಾವರ ಶ್ರೀಗಳು ಪರ್ಯಾಯ ಪೀಠಸ್ಥರಾಗಿದ್ದಾಗ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರನ್ನು ಶ್ರೀಮಠದ ಸಕಲ ಗೌರವಗಳೊಂದಿಗೆ ಬರಮಾಡಿಕೊಂಡು, ಅವರಿಂದ ಧಾರ್ಮಿಕ ಪ್ರವಚನವನ್ನು ಏರ್ಪಡಿಸಿ ಸತ್ಕರಿಸಿದ್ದು ಇನ್ನೂ ಹಸಿರಾಗಿ ಉಳಿದ ನೆನಪು.

ಹಿಂದಿನ ಮತ್ತು ಇಂದಿನ ಕಾಣಿಯೂರು ಮಠಾಧೀಶರಾದ ಶ್ರೀ ವಿದ್ಯಾವಾರಿಧಿ ಮತ್ತು ಶ್ರೀ ವಿದ್ಯಾವಲ್ಲಭತೀರ್ಥರು ಶೃಂಗೇರಿಗೆ ಸ್ವತಹ ತೆರಳಿ ಜಗದ್ಗುರುಗಳವರ ದರ್ಶನ ಮಾಡಿ, ಅವರೊಡನೆ ಸುದೀರ್ಘ ಕಾಲ ಸಂಭಾಷಣೆ ನಡೆಸಿದ್ದರು. ಈಗಿನ ಕಾಣಿಯೂರು ಮಠಾಧಿಪತಿ ಶ್ರೀ ವಿದ್ಯಾವಲ್ಲಭತೀರ್ಥರು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಉಡುಪಿಯ ಶ್ರೀಶಾರದಾ ಮಂಟಪದ ಕಾರ್ಯಕ್ರಮವೊಂದಕ್ಕೆ ಚಿತ್ತೈಸಿದ ಸಂದರ್ಭದಲ್ಲಿ ಅವರನ್ನು ಶ್ರೀಕೃಷ್ಣಮಠಕ್ಕೆ ಕರೆತಂದು ವಿಶೇಷವಾಗಿ ಪುರಸ್ಕರಿಸಿದ್ದರು. ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಸ್ವಾಮಿಗಳವರು 2010ರಲ್ಲಿ ತಮ್ಮ ಪರ್ಯಾಯ ಮುಗಿದ ಕೆಲವೇ ದಿನಗಳಲ್ಲಿ ಶೃಂಗೇರಿಗೆ ತೆರಳಿ, ಜಗದ್ಗುರುಗಳವರ ದರ್ಶನ ಮಾಡಿ, ಆತ್ಮೀಯವಾಗಿ ಸಂಭಾಷಣೆ ನಡೆಸಿದ್ದರು. ಕಾಣಿಯೂರು ಮಠಾಧಿಪತಿ ಶ್ರೀ ವಿದ್ಯಾವಾರಿಧಿ ತೀರ್ಥರು ಕೊನೆಯ ಬಾರಿಗೆ ಪೀಠವನ್ನೇರುವ ಸಮಾರಂಭದಲ್ಲಿ ಶೃಂಗೇರಿ ಶ್ರೀಶಾರದಾಪೀಠದ ಆಡಳಿತಾಧಿಕಾರಿ ಪದ್ಮಶ್ರೀ ಡಾ। ವಿ.ಆರ್. ಗೌರಿಶಂಕರ್ ಅವರನ್ನು ಆಹ್ವಾನಿಸಿ, ಅವರಿಗೆ 'ಶ್ರೀಕೃಷ್ಣಾನುಗ್ರಹ ಪ್ರಶಸ್ತಿ' ನೀಡಿ ಗೌರವಿಸಿದ್ದರು. ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರ ತೀರ್ಥರು 2010ರ ಡಿಸೆಂಬರ್‌ನಲ್ಲಿ ಶ್ರೀಕೃಷ್ಣನಿಗೆ ನವರತ್ನ ರಥವನ್ನು ಸಮರ್ಪಿಸುವ ವಿಶೇಷ ಕಾರ್ಯಕ್ರಮಕ್ಕೆ ಡಾ। ವಿ.ಆರ್.ಗೌರೀಶಂಕರ್ ಅವರನ್ನು ಕರೆಸಿ, ಪುರಸ್ಕರಿಸಿದ್ದರು. ಹೀಗೆ ಉಡುಪಿಯ ಮಠಗಳವರು ತಾವು ಅನ್ಯ ಸಂಪ್ರದಾಯದವರಾಗಿದ್ದರೂ ಶೃಂಗೇರಿ ಶ್ರೀಶಾರದಾ ಪೀಠದೊಂದಿಗೆ ಉತ್ತಮ ಬಾಂಧವ್ಯವನ್ನು ಉಳಿಸಿಕೊಂಡು, ಅದನ್ನು ಬೆಳೆಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಇಲ್ಲಿ ಸಂಕ್ಷೇಪವಾಗಿ ವಿವರಿಸಿದಂತೆ ಶೃಂಗೇರಿ ಶ್ರೀಶಾರದಾ ಪೀಠಕ್ಕೂ, ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಗೂ ಆದಿಶಂಕರಾಚಾರ್ಯರ ಕಾಲದಿಂದಲೂ ಉತ್ತಮ ಸಂಬಂಧ ಬೆಳೆದು ಬಂದಿದೆ. ಶೃಂಗೇರಿ ಪೀಠದ ಜಗದ್ಗುರುಗಳವರನ್ನು ಈ ಜಿಲ್ಲೆಯನ್ನಾಳಿದ ಅರಸರು, ಬೇರೆ-ಬೇರೆ ಸಂಪ್ರದಾಯದ ಜನರೂ ತುಂಬ ಗೌರವದಿಂದ ಕಂಡಿದ್ದಾರೆ. ಶ್ರೀಶಾರದಾ ಪೀಠದ ಹೆಚ್ಚಿನ ಎಲ್ಲ ಜಗದ್ಗುರುಗಳೂ ಈ ನೆಲದಲ್ಲಿ ಧರ್ಮಯಾತ್ರೆ ಕೈಗೊಂಡು, ಅದ್ವೈತ ತತ್ತ್ವವನ್ನು ಪ್ರಚಾರ ಮಾಡಿದ್ದಾರೆ. ತಾತ್ತ್ವಿಕ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಭಿನ್ನಮತವನ್ನು ಅನುಸರಿಸುವ ಉಡುಪಿಯಂತಹ ಮಠಗಳೂ ಸಹ ಶೃಂಗೇರಿ ಜಗದ್ಗುರು ಪೀಠದ ಘನತೆಯನ್ನು ಮಾನ್ಯಮಾಡಿವೆ. ಶ್ರೀ ಮಠಕ್ಕೆ ಈ ಜಿಲ್ಲೆಯಾದ್ಯಂತ ಲಕ್ಷೋಪಲಕ್ಷ ಶಿಷ್ಯರಿದ್ದಾರೆ. ಶೃಂಗೇರಿ ಧರ್ಮಸಂಸ್ಥಾನದ ಈಗಿನ ಅಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರಂತೂ ಈ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಅನೇಕ ಬಾರಿ ವ್ಯಾಪಕವಾಗಿ ಧರ್ಮಯಾತ್ರೆ ಕೈಗೊಂಡು, ಈ ಸಂಬಂಧವನ್ನು ಮತ್ತಷ್ಟು ದೃಢಗೊಳಿಸುತ್ತಿದ್ದಾರೆ.

(ಮುಗಿಯಿತು)

## ಅಭಿನಂದನೆ

### ಮಾ। ಅಮಿತೇಶ್ ಸಿ.ರಾವ್



ತಮಿಳ್ನಾಡಿನ ಚೆನ್ನೈಯಲ್ಲಿ ನಡೆದ ರಾಷ್ಟ್ರ ಮಟ್ಟದ ಗಣಿತ ಅಬಾಕಸ್ ಸ್ಪರ್ಧೆಯಲ್ಲಿ ನಾಸಿಕ್‌ನ L'rcole Silver Oak ಶಾಲೆಯ 5ನೇ ತರಗತಿಯ ವಿದ್ಯಾರ್ಥಿ ಮಾ। ಅಮಿತೇಶ್ ಸಿ.ರಾವ್ ಚಾಂಪಿಯನ್ ಆಫ್ ಚಾಂಪಿಯನ್ ಆಗಿ ಬಹುಮಾನಿತನಾಗಿರುತ್ತಾನೆ. ಕಳೆದ ಎರಡು ವರ್ಷಗಳಿಂದ ಗಣಿತ ಅಬಾಕಸ್‌ನ ಸ್ಪರ್ಧೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಮಾ। ಅಮಿತೇಶ್ 2009-10ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ಲೆವೆಲ್ ಸ್ಪರ್ಧೆಯಲ್ಲಿ ಹಾಗೂ 2010-11ರಲ್ಲಿ ಮಹಾರಾಷ್ಟ್ರದ ಪೂನದಲ್ಲಿ ನಡೆದ ದ್ವಿತೀಯ ಲೆವೆಲ್‌ನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಗೆದ್ದಿರುತ್ತಾನೆ. ಈ ಬಗ್ಗೆ 2011ರ ಫೆಬ್ರವರಿ ತಿಂಗಳ ಶಾರದಾ ಪತ್ರಿಕೆಯಲ್ಲಿ ವರದಿ ಮಾಡಿತ್ತು.

ಈ ವರ್ಷ ಚೆನ್ನೈಯಲ್ಲಿ ನಡೆದ ತೃತೀಯ ಲೆವೆಲ್‌ನ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಮಾ। ಅಮಿತೇಶ್ ನಾಸಿಕ್ ತ್ರಿನೇತ್ರ ಅಬಾಕಸ್ ಸೆಂಟರಿನಲ್ಲಿ ತರಬೇತಿ ಪಡೆದ 32 ವಿದ್ಯಾರ್ಥಿಗಳ ಹಾಗೂ ಉಳಿದ ಬೇರೆ ಬೇರೆ ರಾಜ್ಯಗಳಿಂದ ಬಂದ 6,000 ವಿದ್ಯಾರ್ಥಿಗಳನ್ನು ಹಿಂದಿಕ್ಕಿ ಈ ಬಹುಮಾನವನ್ನು ಪಡೆದಿರುತ್ತಾನೆ.

ಮಾ। ಅಮಿತೇಶ್ ನಾಸಿಕ್‌ನಲ್ಲಿ ಉದ್ಯೋಗದಲ್ಲಿರುವ ಶ್ರೀ ಚಂದ್ರಶೇಖರ ರಾವ್ ಕರಂದಾಡಿ ಹಾಗೂ ಶ್ರೀಮತಿ ಭಾರತಿ ಚಂದ್ರಶೇಖರ್ ದಂಪತಿಗಳ ಪುತ್ರ.

### ಕು। ಅಪರ್ಣಾರಾವ್



ಮಹಾರಾಷ್ಟ್ರ ಪ್ರೌಢಶಾಲಾ ಶಿಕ್ಷಣ ಮಂಡಳಿ, ಪೂನಾ ಇವರು ಕಳೆದ ಮಾರ್ಚ್ 2011ರಲ್ಲಿ ನಡೆಸಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕುಮಾರಿ ಅಪರ್ಣಾರಾವ್ ಲಾತೂರ್ ಇವಳು 627/650 (ಶೇಕಡಾ 96.46) ಅಂಕಗಳನ್ನು ಗಳಿಸಿ, ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಇವಳು ಲಾತೂರಿನಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿರುವ ಬೆಳ್ಮಣ್ಣು ಆನಂದರಾವ್ ಮತ್ತು ಶ್ರೀಮತಿ ಅನುಸೂಯಾ ಇವರ ಮೊಮ್ಮಗಳು ಹಾಗೂ ಶ್ರೀಮತಿ ಪಾವನ ಮತ್ತು ಡಾ। ಅರುಣಕುಮಾರ್ ಇವರ ಪುತ್ರಿ.

### ಸೂರಜ್ ರಾವ್ ಬಿ.



ಬಪ್ಪನಾಡು ಪುರುಷೋತ್ತಮ ರಾವ್ ಮತ್ತು ಶ್ರೀಮತಿ ಲಲಿತಾ ರಾವ್‌ರವರ ಪುತ್ರ ಸೂರಜ್ ರಾವ್ ಬಿ. ಇವನು 2010-11ನೇ ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ 611 (97.76%) ಅಂಕಗಳನ್ನು ಗಳಿಸಿರುತ್ತಾನೆ. ಇವನು ಬೆಂಗಳೂರು ಮಲ್ಲೇಶ್ವರಂನ ಶ್ರೀವಿದ್ಯಾಮಂದಿರ ಹೈಸ್ಕೂಲ್‌ನ ವಿದ್ಯಾರ್ಥಿ. ಈತ ದಿ। ಬಪ್ಪನಾಡು ನಾರಾಯಣ ರಾಯರ ಹಾಗೂ ಕುಕ್ಕೇಹಳ್ಳಿ ದಿ। ಜನಾರ್ದನ್‌ರಾವ್ ಮತ್ತು ಶ್ರೀಮತಿ ಸುಲೋಚನಾ ರಾವ್ ಇವರ ಮೊಮ್ಮಗ.

### ಕು। ಅಂಕಿತ ಸಿ.ರಾವ್



2010-11ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಹಾರಾಷ್ಟ್ರದ ನಾಸಿಕ್‌ನ L'rcole Silver Oak ಶಾಲೆಯ ವಿದ್ಯಾರ್ಥಿನಿ ಕು। ಅಂಕಿತಾ ಸಿ.ರಾವ್ 89.09% (550ರಲ್ಲಿ 490) ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾಳೆ. ಈಕೆ ನಾಸಿಕ್‌ನಲ್ಲಿ ವಾಸ್ತವ್ಯ ದಲ್ಲಿರುವ ಕರಂದಾಡಿ ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಭಾರತಿ ಚಂದ್ರಶೇಖರ್ ದಂಪತಿಗಳ ಪುತ್ರಿ.

### ನವನೀಶ ಕುಮಾರ

ಕೇರಳ ಸರಕಾರ ನಡೆಸಿದ 2010-11ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪೆರ್ಲ ಶ್ರೀ ಸತ್ಯನಾರಾಯಣ ಪ್ರೌಢಶಾಲೆಯ ವಿದ್ಯಾರ್ಥಿ ನವನೀಶ ಕುಮಾರ ಬಿ. ಎಲ್ಲಾ ವಿಷಯಗಳಲ್ಲೂ ಎ ಪ್ಲಸ್ ಗ್ರೇಡ್ ಪಡೆದಿರುತ್ತಾನೆ. ಇದೀಗ ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಅಧ್ಯಯನ ಮುಂದುವರಿಸುತ್ತಿರುವ ಈತನ ಅಂಕಪಟ್ಟಿಯು ಪ್ರಾಂಶುಪಾಲರಿಗೆ ತಲುಪಿದ್ದು 96% ಅಂಕಗಳನ್ನು ಪಡೆದಿರುತ್ತಾನೆಂದು ತಿಳಿದು ಬಂದಿದೆ. ಈತ ತಿರುವನಂತಪುರದಲ್ಲಿ ಜರಗಿದ 97ನೇ 'ಇಂಡಿಯನ್ ಸಯನ್ಸ್ ಕಾಂಗ್ರೆಸ್'ನ ಭಾಗವಾದ 'ಚಿಲ್ಡ್ರನ್ ಸಯನ್ಸ್ ಕಾಂಗ್ರೆಸ್ 2010'ರಲ್ಲಿ ಭಾಗವಹಿಸಿರುತ್ತಾನೆ. ಮಾತ್ರವಲ್ಲದೆ ಕೇರಳ ಮಾಹಿತಿ ತಂತ್ರಜ್ಞಾನ ವಿಭಾಗದಿಂದ ನಡೆಸಲ್ಪಡುವ 'ಸಯನ್ಸ್ ಪ್ರೊಜೆಕ್ಟ್' ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಬಿ ಗ್ರೇಡ್ ಗಳಿಸಿರುತ್ತಾನೆ. ಈತ ಬಜಕೂಡ್ಲು ರಾಜೇಂದ್ರ ಮತ್ತು ರಾಜಲಕ್ಷ್ಮೀ ದಂಪತಿಗಳ ಪುತ್ರ

### ಕು। ವಸುಪ್ರಧ ಯು.



ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು 2010-11ನೇ ಸಾಲಿನಲ್ಲಿ ನಡೆಸಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವೆಬ್‌ಸ್ಟರ್ಸ್ ಹೈಸ್ಕೂಲ್, ಬೆಂಗಳೂರು ಇಲ್ಲಿ ವಿದ್ಯಾರ್ಥಿನಿ ಕು। ವಸುಪ್ರಧ ಯು. 96% ಅಂಕ ಗಳಿಸಿರುತ್ತಾಳೆ. ಸಂಸ್ಕೃತದಲ್ಲಿ 124, Social Studies 99 ಅಂಕ ಗಳಿಸಿರುವ ಈಕೆ ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀ ಸುರೇಶ್ ಯು.ಜಿ. ಹಾಗೂ ಶ್ರೀಮತಿ ವತ್ಸಲ ಕುಮಾರಿ ಇವರ ಮಗಳು ಹಾಗೂ ಯು.ಗೋಪಾಲ ರಾವ್ ಹಾಗೂ ಚಿತ್ರಾಪುರದ ದಿ। ವೆಂಕಟ್ರಾವ್‌ರವರ ಮೊಮ್ಮಗಳು.

2010ನೇ ಕನ್ನಡ ಪ್ರತಿಭಾ ಪರೀಕ್ಷೆಯಲ್ಲಿ ಸಿರಿಗನ್ನಡ ಪ್ರಶಸ್ತಿಯಲ್ಲಿ ಜಿಲ್ಲಾ ಮಟ್ಟದಲ್ಲಿ 5ನೇ ದರ್ಜೆಯಲ್ಲಿ ಅಕಾಡೆಮಿ ಆಫ್ ಮೆತಮೆಟಿಕ್ಸ್ ರವರು ನಡೆಸಿದ Mathamatics 2010, ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ರ್‍ಯಾಂಕ್‌ನಲ್ಲಿ ತೇರ್ಗಡೆಯಾಗಿರುತ್ತಾಳೆ. ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯವರು ಏರ್ಪಡಿಸಿದ ಅಪರಾಧ ತಡೆಮಾಸ 2010ರಲ್ಲಿ ಭಾಗವಹಿಸಿ ಪೊಲೀಸ್ ಇಲಾಖೆಯಿಂದ 2ನೇ ಬಹುಮಾನ ಪಡೆದಿರುತ್ತಾಳೆ. ಶಾಲೆಯಲ್ಲಿ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಗಳಿಸಿರುತ್ತಾಳೆ.

### ಕು। ಪವಿತ್ರ ವಿ.ರಾವ್



ಮಂಗಳೂರು ಶಾರದ ವಿದ್ಯಾಲಯದ 2010-11ನೇ ಸಾಲಿನ 10ನೇ ತರಗತಿ CBSC ಪಬ್ಲಿಕ್ ಪರೀಕ್ಷೆಯಲ್ಲಿ ಎಲ್ಲ ಪಠ್ಯ ವಿಷಯದಲ್ಲಿ 10ರಲ್ಲಿ 10 ಗ್ರೇಡ್ ಅಂಕಗಳನ್ನು ಪವಿತ್ರ ವಿ.ರಾವ್ ಪಡೆದಿರುತ್ತಾಳೆ. ಇವಳು ತನ್ನ ವಿದ್ಯಾಭ್ಯಾಸದ ಜೊತೆಗೆ ಒಂದನೇ ತರಗತಿಯಿಂದ ಗುರುಗಳಾದ ವಿದುಷಿ ಶ್ರೀಮತಿ ಗೀತಾ ಸರಳಾಯ ಹಾಗೂ ವಿದುಷಿ ಶ್ರೀಮತಿ ರಶ್ಮಿ ಚಿದಾನಂದರವರಲ್ಲಿ ಭರತ ನಾಟ್ಯವನ್ನು ಅಭ್ಯಾಸ ಮಾಡಿ ಜೂನಿಯರ್ ಮತ್ತು ಸೀನಿಯರ್ ಗ್ರೇಡ್ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿ ತನ್ನ ಭರತ ನಾಟ್ಯ ರಂಗಪ್ರವೇಶವನ್ನು ಮಂಗಳೂರಿನ ಪುರಭವನದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿ ಅಪಾರ ಜನ ಮೆಚ್ಚುಗೆಗಳಿಸಿದ್ದಾಳೆ ಹಾಗೂ ಎಲ್ಲ ಪತ್ರಿಕಾ ಮಾಧ್ಯಮದವರಿಂದ ಪ್ರಶಂಸೆಗಳ ಸುರಿಮಳೆಯನ್ನು ಪಡೆದಿದ್ದಾಳೆ. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಎಂಟು ವರುಷಗಳ ಕಾಲ ವಿದೂಷಿ ಶಂಕರಿಮೂರ್ತಿ ಬಾಳಿಲರವರಲ್ಲಿ ಕಲಿತಿದ್ದಾಳೆ. ಇವಳ ಸಾಧನೆಯನ್ನು ಗುರುತಿಸಿ ಲಯನ್ಸ್ ಕ್ಲಬ್ ಮಂಗಳೂರು ಇದರ ಅಧ್ಯಕ್ಷರಾದ ಲಯನ್ ವೇಣುಗೋಪಾಲ್ ಹಾಗೂ ಲಯನೆಸ್ ಅಧ್ಯಕ್ಷೆ ಅರುಣಾ ಸೋಮಶೇಖರ್ ಮತ್ತು ಸದಸ್ಯರು ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ ಇವಳ ಭವಿಷ್ಯ ಉಜ್ವಲವಾಗಲೆಂದು ಶುಭ ಹಾರೈಸಿದ್ದಾರೆ. ಇವಳ ಹವ್ಯಾಸ ಚಾರ್‌ಕೋಲ್ ಪೈಂಟಿಂಗ್, ಹಾಡುಗಾರಿಕೆ, ಗಣಪತಿ ಚಿತ್ರಗಳ ಸಂಗ್ರಹ, ಕ್ರೀಡೆಯಲ್ಲಿ ಗುಂಡೆಸೆತ, ಜಾವೆಲಿನ್ ಎಸೆತ, ಡಿಸ್ಕಸ್ ಎಸೆತ ಹಾಗೂ ಚೆಸ್‌ನಲ್ಲಿ ಪರಿಣತಿ ಪಡೆದಿದ್ದಾಳೆ. ಇವಳು PUCಯಲ್ಲಿ PCMBಯನ್ನು ಆಯ್ಕೆಮಾಡಿ ಮಂಗಳೂರಿನ ಎಕ್ಸ್‌ಪರ್ಟ್ ಪ್ರೀ ಯುನಿವರ್ಸಿಟಿ ಸಾಯನ್ಸ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಳೆ.

ಇವಳು ಮಂಗಳೂರಿನ ಖ್ಯಾತ ಉದ್ಯಮಿ ಸ್ಟೇಂಡರ್ಡ್ ಅಟೋಮೊಬೈಲ್ಸ್‌ನ ಮ್ಹಾಲಕರಾದ ಶ್ರೀ ಬಿ.ಎಂ.ಸಂಜೀವರಾವ್ ಹಾಗೂ ದಿ। ಸುವರ್ಣ ಕುಮಾರಿ ಮತ್ತು ನಾರಾವಿ ದಿ। ತಿಮ್ಮಪ್ಪಯ್ಯ ಹಾಗೂ ಶ್ರೀಮತಿ ರತ್ನಾವತಿಯವರ ಮೊಮ್ಮಗಳು ಹಾಗೂ ಶ್ರೀ ಬಿ.ಯಸ್.ವಿನೋದ್ ರಾವ್ ಹಾಗೂ ಶ್ರೀಮತಿ ಜಯಂತಿ ರಾವ್‌ರವರ ಪುತ್ರಿ.

### ಕು। ಅರ್ಪಿತಾ



ಎನ್‌ಎಂಪಿಟಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯಾದ ಕು। ಅರ್ಪಿತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.91 ಅಂಕಗಳನ್ನು ಗಳಿಸಿರುತಾಳೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿ ಯಲ್ಲಿರುವ ಈಕೆ ಯಕ್ಷಗಾನ, ಭಾಷಣ, ನೃತ್ಯ, ಸಂಗೀತ, ಪ್ರಬಂಧ ಮುಂತಾದ ಲಲಿತ ಕಲೆಗಳಲ್ಲಿ ಅತ್ಯಂತ ಆಸಕ್ತಿಯನ್ನು ಹೊಂದಿದ್ದು ಹಲವಾರು ಬಹುಮಾನವನ್ನು ಗಳಿಸಿರುತಾಳೆ. ಇತ್ತೀಚೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ 'ಪ್ರತಿಭಾ ಕಾರಂಜಿ'ಯ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಹೋಬಳಿ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದು ಬಾಗಲಕೋಟೆಯಲ್ಲಿ ನಡೆದ ರಾಜ್ಯಮಟ್ಟದ ಪ್ರತಿಭಾಕಾರಂಜಿಗೂ ಆಯ್ಕೆಯಾಗಿ ಭಾಗವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ. ಸಂಸ್ಕೃತ ಭಾರತಿ ಮಂಗಳೂರು ಇವರು ಆಯೋಜಿಸಿದ 'ಸಂಸ್ಕೃತೋತ್ಸವ 2010'ರ ಸಂಸ್ಕೃತ ಕಥಾಕಥನದಲ್ಲಿ ದ್ವಿತೀಯ ಸ್ಥಾನ ಹಾಗೂ ಸಂಸ್ಕೃತ ಭಾಷಣದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತಾಳೆ. ಯಕ್ಷಗಾನ ಕಲಾ ಮಂಡಳಿ, ಪಣಂಬೂರು ಇವರು ಆಯೋಜಿಸಿದ ಸಂಕ್ರಾಂತಿ ಉತ್ಸವ 2010 ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಭಾಗದ ಪೌರಾಣಿಕ ಕನ್ನಡ ಭಾಷಣದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತಾಳೆ. ಇನ್ನಿತರ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ತನ್ನದಾಗಿಸಿಕೊಂಡಿದ್ದಾಳೆ. ಈಕೆ ಪ್ರಸ್ತುತ ಸುರತ್ಕಲ್ ಮಲ್ಲಮಾರಿನಲ್ಲಿ ನೆಲೆಸಿರುವ, ಎನ್‌ಎಂಪಿಟಿ ಉದ್ಯೋಗಿ, ಚಿತ್ರಾಪುರ ಸಿ.ಶ್ರೀಕಾಂತ್ ರಾವ್ ಹಾಗೂ ಶ್ರೀಮತಿ ಸುನಿತಾ ಎಸ್.ರಾವ್ ದಂಪತಿಗಳ ಪುತ್ರಿ.


**ಶ್ರೀ ಯಕ್ಷದೇವ ಮಿತ್ರಕಲಾಮಂಡಳಿ**

ಬೆಳುವಾಯಿ, (C/o ಶೋಭಾ ಸ್ಟುಡಿಯೋ), ಮಂಗಳೂರು, ದ.ಕ.-574213

**ಇವರು ಸಾದರಪಡಿಸುತ್ತಿರುವ**

**ಯಕ್ಷಲೋಕ ದರ್ಶನ-2011**

***ಬಲ್ಲಿರೇನಯ್ಯಾ.....?***

**ಸ್ಥಳ : ಸಮಾಜ ಮಂದಿರ ಸಭಾ (ರಿ.) ಮೂಡುಬಿದಿರೆ ಇದರ ಆಶ್ರಯದಲ್ಲಿ ಮಿಜಾರು ದಿ। ಕೆ. ಸುಬ್ರಾಯ ಭಟ್ ಕಲಾವೇದಿಕೆಯಲ್ಲಿ**

**18-07-2011ನೇ ಸೋಮವಾರದಿಂದ**

**24-07-2011ನೇ ಆದಿತ್ಯವಾರದ ತನಕ**

**ಹೆಸರಾಂತ ಕಲಾವಿದರಿಂದ**

**ಪ್ರತೀ ದಿನ ಸಂಜೆ 5ರಿಂದ 9ರ ವರೆಗೆ ವಿವಿಧ ಯಕ್ಷಗಾನ/ತಾಳಮದ್ದಳೆ ಪ್ರದರ್ಶನಗಳು ನಡೆಯಲಿವೆ.**

**ಸರ್ವರಿಗೂ ಆದರದ ಸ್ವಾಗತ**


**ಹನಿಗವನಗಳು**

### ಹೀಗೊಂದು ಬಿನ್ನಹ

ನಮ್ಮದು ಸ್ನೇಹ ಬಂಧನ
ಸದಾ ಮನದೊಳು ನಂದನ
ಮರೆಯಬೇಡಿ ಈ ಅಜೀತನ
ಹಸನಾಗಲಿ ನಿಮ್ಮ ಬಾಳು-ನಯನ
ಬೇಡುವೆನು ಗಜವದನನ


### ಸ್ನೇಹ

ಬಾ, ಓ ನನ್ನ ಶೈಲು
ಏನು ನಿನ್ನ ಸ್ಟೈಲು!
ದೊರಕಿತೆನಗೆ ಸ್ನೇಹದ ಕ್ಯೊಲು
ಆಗದಿರಲಿ ಈ ಸ್ನೇಹವೇ ಜೈಲು!

- ವೈ. ಎ. ರಾವ್


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್** : 2556536 (R), 2555466 (0)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ರತ್ನಾವತಿ ಮತ್ತು ಬಪ್ಪನಾಡು ಶ್ರೀ ಅನಂತಕೃಷ್ಣರಾವ್ ಇವರ ಪುತ್ರ **ಗೋವಿಂದ ರಾಜ (ಶಂಕರ)** ಹಾಗೂ ಶ್ರೀಮತಿ ವಿನೋದ ಮತ್ತು ಮೂಡುಬೆಳ್ಳೆ ಶ್ರೀ ಸುಧಾಕರ ರಾವ್ ಇವರ ಪುತ್ರಿ **ಸೌಮ್ಯ** ಇವರ ವಿವಾಹವು ತಾ.20-6-2011 ರಂದು ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರಿ ಸಭಾಭವನದಲ್ಲಿ ನೆರವೇರಿತು.

★★★ ★★★

ವಕ್ವಾಡಿ ಶ್ರೀಮತಿ ಮತ್ತು ಶ್ರೀ ಪುಟ್ಟರಾಜ ಹೆಬ್ಬಾರ್ ಇವರ ಪುತ್ರಿ **ಭಾಗ್ಯಶ್ರೀ** ಹಾಗೂ ಪೆರ್ಡೂರು ಶ್ರೀಮತಿ ಮತ್ತು ಶ್ರೀ ನರಸಿಂಹ ಬಂಡಿ ಇವರ ಪುತ್ರ **ಪ್ರಮೋದ ಕುಮಾರ್** ಇವರ ವಿವಾಹವು ತಾ.3-7-2011ರಂದು ಕುಂದಾಪುರ ಹಂಗಳೂರು ಶ್ರೀ ಅನಂತಪದ್ಮನಾಭ ಸಭಾಗೃಹದಲ್ಲಿ ನೆರವೇರಿತು.

★★★ ★★★

ದಿ। ವೈ. ಸಂಜೀವ ರಾವ್ ಮತ್ತು ದಿ। ಶ್ರೀಮತಿ ವಸಂತಿ ರಾವ್ ಇವರ ಪುತ್ರ **ಶಿವಪ್ರಸಾದ್** ಹಾಗೂ ಅಡೂರಿನ ಶ್ರೀಮತಿ ಮತ್ತು ಡಾ। ಎ. ಎಸ್.ಅಶೋಕ್‌ಕುಮಾರ್ ಇವರ ಪುತ್ರಿ **ಶೋಭಾ** ಇವರ ವಿವಾಹವು ತಾ.19-6-2011 ರಂದು ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

## ಶುಭ ಜನನ

ಶ್ರೀಮತಿ ಲಲಿತಾವಿಶ್ವನಾಥರಾವ್‌ರವರ ಪುತ್ರ ಹುಣಸೂರಿನ ಶಿವಕುಮಾರ್ ಮತ್ತು ಶೋಭಾ ದಂಪತಿಗಳಿಗೆ ತಾ.27-5-2011ರಂದು ಗಂಡು ಶಿಶುವಿನ ಜನನ.

★★★★

ಕಟೀಲು ರಾಮಚಂದ್ರ ರಾವ್ ಮತ್ತು ಜ್ಯೋತಿ ದಂಪತಿಗಳಿಗೆ (ಬೆಳ್ಳೆ ರಾಘವೇಂದ್ರ ರಾಯರ ಅಳಿಯ ಮತ್ತು ಮಗಳು) ತಾ.08-05-2011 ಗಂಡು ಮಗುವಿನ ಜನನ.

## ನಿಧನ

### ಶ್ರೀ ನಾಗರಾಜ

ಶ್ರೀ ಬಜೆ ವಿಠಲ ರಾವ್ ಕೋರೆಗಾಂವ್ ಸತಾರಾ ಇವರ ಅಣ್ಣ ದಿ। ಬಜೆ ಗೋವಿಂದ ರಾವ್ ಶ್ಯಾನಭಾಗರ ಪುತ್ರ ನಾಗರಾಜ ಇವರು ತಾ.29-06-2011ರಂದು ನಿಧನರಾದರು. ಶ್ರೀಯುತರು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಕರ್ಕಾಟಕ ಮಾಸ ವಿಶೇಷ ದಿನಗಳು

| | |
|---|---|
| 17-07-2011 | ಕರ್ಕಾಟಕ ಸಂಕ್ರಮಣ |
| 18-07-2011 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ 9-24 |
| 20-07-2011 | ಪುಷ್ಯಾ ನಕ್ಷತ್ರಾರಂಭ |
| 26-07-2011 | ಸರ್ವೈಕಾದಶೀ |
| 28-07-2011 | ಪ್ರದೋಷಃ, |
| 30-07-2011 | ಅಮಾವಾಸ್ಯಾ |
| 03-08-2011 | ಆಶ್ಲೇಷಾ ನಕ್ಷತ್ರಾರಂಭ |
| 04-08-2011 | ನಾಗರ ಪಂಚಮಿ |
| 09-08-2011 | ಸರ್ವೈಕಾದಶೀ |
| 11-08-2011 | ಪ್ರದೋಷಃ |
| 12-08-2011 | ವರಮಹಾಲಕ್ಷ್ಮೀ ವ್ರತ |
| 13-08-2011 | ಪೂರ್ಣಿಮಾ |
| 17-08-2011 | ಸಿಂಹ ಸಂಕ್ರಮಣ |

## ಉಪನಯನ

### ಚಿ। ಸುನಾಶ್

ದಿ। ವಿಷ್ಣು ಶರ್ಮ ಮತು ದಿ। ಶ್ರೀಮತಿ ಶಾಂಭವಿಯವರ ಪೌತ್ರ, ಶ್ರೀಮತಿ ಆರತಿ ಮತ್ತು ಶ್ರೀ ಸೂರ್ಯನಾರಾಯಣ ಶರ್ಮರ ಪುತ್ರ ಸುನಾಶ್ ಇವನ ಬ್ರಹ್ಮೋಪದೇಶವು ತಾ.26-06-2011ರಂದು ಉಡುಪಿ ರಾಷ್ಟ್ರೀಯ ಹೆದ್ದಾರಿ 17ರ ಬಳಿಯ ಶ್ಯಾಮಿಲಿಯ ಶ್ರೀ ಲಕ್ಷ್ಮೀ ಜನಾರ್ದನ ಮಂಟಪದಲ್ಲಿ ಜರಗಿತು.

★★★★

### ಚಿ। ಅನುಪ್

ಶ್ರೀಮತಿ ಜಯಲಕ್ಷ್ಮೀ ಮತು ಶ್ರೀ ರಾಘವೇಂದ್ರ ಎಮ್.ರಾವ್ ಇಂದಾಪುರೆ ಇವರ ಪುತ್ರ (ಶ್ರೀಮತಿ ಮೋಹಿನಿ ಮತ್ತು ಶ್ರೀ ಕಟಪಾಡಿ ಲಕ್ಷ್ಮೀನಾರಾಯಣ ರಾವ್ ಇಂದಾಪುರ ಇವರ ಪೌತ್ರ) ಅನುಪ್‌ನ ಬ್ರಹ್ಮೋಪದೇಶವು ತಾ.26-06-2011ರಂದು ಶ್ರೀಶಾರದಾ ಮಂಟಪ ಕುಂಜಿಬೆಟ್ಟು ಇಲ್ಲಿ ಜರಗಿತು.

## A FRIEND

We can pay cost to a toy which gives us fun,
But not to a friend, who is as bright as sun.
Imagine this world without this bright sun!
Oh no! I and you are no one
I have got a wonderful friend who is equal to God
For this I thank my mighty whom I believe as my Lord.
I have got everything from this house of treasure,
But his wealthy heart of kindness nobody can measure.
There is no substitute to him in my life which is full of race.
I know that he is always with me in any case.
Greenery to the grass is from sun, moon or season?
In the same way a character of a person will not have a single reason.
He is the person, whom I would ever like to sing.
If I have friend like him I would ever not exchange my position with a king!

**-Pragathi Bhandi, Perdoor**
10th Std., MJC, Manipal

## ಏಕಾದಶ ರುದ್ರ

ಶ್ರೀಯುತ ಬಿ. ವಾಸುದೇವರಾವ್ ದಂಪತಿಗಳು ಮತ್ತು ಮಕ್ಕಳು ಶಾರದಾ ದೇವಸ್ಥಾನ ಕುಂಜಿಬೆಟ್ಟು ಇಲ್ಲಿ ದಿನಾಂಕ 23-6-2011ರಂದು ಏಕಾದಶ ರುದ್ರಪೂಜೆ ಪ್ರತಿವರ್ಷದಂತೆ ನೆರವೇರಿಸಿದರು. ಅವರಿಗೆ ಶ್ರೀಶಾರದಾ ಬಳಗವು ಶುಭ ಹಾರೈಸುತ್ತದೆ.

## 80ನೇ ವರ್ಷಾಚರಣೆ

ಶ್ರೀಯುತ ಬಿ. ವಾಸುದೇವರಾವ್ ಇವರ 80ನೇ ವರ್ಷಾಚರಣೆಯನ್ನು ತಾ.08-07-2011 ರಂದು ಅವರ ಮಕ್ಕಳು, ಅಳಿಯಂದಿರುವ ಮತ್ತು ಬಂಧುವರ್ಗದವರು ಸೇರಿ ಶ್ರೀ ರಾಘವೇಂದ್ರ ಮಠದ ಸಭಾಭವನದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಇತರ ಶುಭ ಕಾರ್ಯಗಳೊಂದಿಗೆ ವಿಜೃಂಭಣೆಯೊಂದಿಗೆ ಆಚರಿಸಿದರು. ವಿಶೇಷ ಸಮಾರಂಭಕ್ಕೆ ಬಂಧುಬಾಂಧವರು, ಮಿತ್ರರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಶುಭ ಹಾರೈಸಿದರು.

## ವೈದ್ಯಕೀಯ ವೇದಿಕೆ–ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ಕ್ಷಯ ರೋಗ (tuberculosis- ಟಿ.ಬಿ.) ಹೇಗೆ ಬರುತ್ತದೆ. ಇದು ದೇಹದ ಯಾವ ಯಾವ ಅಂಗಗಳಿಗೆ ಬರಬಹುದು? ಈ ಖಾಯಿಲೆಯ ಚಿಕಿತ್ಸೆ ಯಾವುದು?**

**ಉತ್ತರ :** ಕ್ಷಯ ರೋಗವು ಮೈಕೋಬ್ಯಾಕ್ಟೀರಿಯಂ ಟ್ಯುಬರ್ ಕ್ಯುಲೋಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಬರುವಂತಹಾ ಕಾಯಿಲೆ. ಇದು ನಮ್ಮ ದೇಹದ ಯಾವುದೇ ಅಂಗವನ್ನು ಬಾಧಿಸಬಹುದಾಗಿದ್ದರೂ ಅತೀ ಸಾಮಾನ್ಯವಾಗಿ ಶ್ವಾಸಕೋಶಗಳನ್ನು ಬಾಧಿಸುತ್ತದೆ. ಕ್ಷಯರೋಗವು ಅತ್ಯಂತ ಪುರಾತನವಾದ ಕಾಯಿಲೆ. ಈ ಹಿಂದೆ ಸರಿಯಾದ ಔಷಧಿಗಳಿಲ್ಲದಿದ್ದ ಸಮಯದಲ್ಲಿ ಮಿಲಿಯಗಟ್ಟಲೆ ಜನರು ಈ ಖಾಯಿಲೆಗೆ ಬಲಿಯಾಗಿದ್ದಾರೆ. ಅಷ್ಟೇ ಅಲ್ಲದೆ ಈ ಖಾಯಿಲೆಯಿದ್ದ ರೋಗಿಗಳು ಇತರರಿಗೆ ಈ ಖಾಯಿಲೆಯನ್ನು ಹರಡಿಸುವರೆಂಬ ಭೀತಿಯಿಂದ ಮನೆಯಿಂದ ಹೊರಗೆ ಹಾಕಲ್ಪಟ್ಟು ಇಂಥಾ ರೋಗಿಗಳಿಗೆಂದೇ ಮೀಸಲಾಗಿಟ್ಟ ಆಸ್ಪತ್ರೆ/ವಾರ್ಡುಗಳಲ್ಲಿ ಜೀವನವನ್ನು ಕಳೆಯುವ ಪರಿಸ್ಥಿತಿ ಇತ್ತು.

ಕ್ಷಯ ರೋಗದ ಬ್ಯಾಕ್ಟೀರಿಯವು ಈ ಖಾಯಿಲೆಯಿಂದ ಬಳಲುತ್ತಿರುವ ರೋಗಿಯ ಕಫದಲ್ಲಿ ಇರುತ್ತದೆ. ರೋಗಿಯು ಕೆಮ್ಮುವಾಗಿ ಕಫದ ಸಣ್ಣ ಉಂಡೆಗಳು ಗಾಳಿಗೆ ಸೇರಿಕೊಂಡು, ಇನ್ನೊಬ್ಬನು ಅದೇ ಗಾಳಿಯನ್ನು ಉಸಿರಾಡುವಾಗ ಈ ಬ್ಯಾಕ್ಟೀರಿಯಾಗಳು ಕಫದ ಉಂಡೆಗಳೊಂದಿಗೆ ಅವನ ಶ್ವಾಸಕೋಶವನ್ನು ಸೇರಿಕೊಳ್ಳುತ್ತವೆ. ನಂತರ ಅಲ್ಲಿ ನಿಧಾನವಾಗಿ ಬೆಳೆದು ಅವನಿಗೆ ಕ್ಷಯರೋಗವನ್ನು ತರುತ್ತವೆ. ಇದು ಕ್ಷಯ ರೋಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ವಿಧಾನ. ಹೀಗೆ ಕ್ಷಯರೋಗದ ಬ್ಯಾಕ್ಟೀರಿಯಾಗಳು ದೇಹವನ್ನು ಪ್ರವೇಶಿಸಿದ ಮೇಲೆ ಅವನಲ್ಲಿ ಕ್ಷಯರೋಗದ ಚಿಹ್ನೆಗಳು ಕಾಣಿಸಿಕೊಳ್ಳಲು ಸುಮಾರು 9 ತಿಂಗಳ ಕಾಲ ಬೇಕು. ಕ್ಷಯರೋಗದ ಬ್ಯಾಕ್ಟೀರಿಯಾವು ರೋಗಿಯ ಮಲಮೂತ್ರಗಳಲ್ಲಿಯೂ ವಿಸರ್ಜಿಸಲ್ಪಡುತ್ತದೆ. ಆದರೆ ಮಲಮೂತ್ರದ ಸಂಪರ್ಕದಿಂದ ಈ ಕಾಯಿಲೆ ಹರಡುವ ಸಾಧ್ಯತೆ ಇಲ್ಲವೆನ್ನುವಷ್ಟು ಕಡಿಮೆ ಇದೆ. ಆದರೂ ಹಸುವಿನ ಹಾಲಿನಿಂದ, ಒಂದು ವೇಳೆ ಹಸುವಿಗೆ ಈ ಕಾಯಿಲೆ ಇದ್ದರೆ ಆ ಹಸುವಿನ ಹಾಲಿನಲ್ಲಿ ಈ ಬ್ಯಾಕ್ಟೀರಿಯಾ ಇದ್ದು ಹಾಗೂ ಆ ಹಾಲನ್ನು ಕುದಿಸದೆ ಕುಡಿದರೆ, ನಮಗೂ ಈ ಮೂಲಕ ಕ್ಷಯರೋಗ ತಗಲುವ ಸಾಧ್ಯತೆ ಇದೆ. ಆದರೆ ಈ ಬ್ಯಾಕ್ಟೀರಿಯಾಗಳು ಹೀಗೆ ನಮ್ಮ ದೇಹವನ್ನು ಪ್ರವೇಶಿಸಿದ ಪ್ರತೀ ಸಂದರ್ಭದಲ್ಲೂ ನಮ್ಮ ದೇಹದಲ್ಲಿ ಬೆಳೆದು ಕಾಯಿಲೆ ತರುವಷ್ಟು ಶಕ್ತಿಯುಳ್ಳವಲ್ಲವೆಂಬುದು ಒಂದು ನಿಟ್ಟುಸಿರು ಬಿಡುವ ವಿಷಯ.

ಕ್ಷಯರೋಗವು ಯಾರಿಗೂ ಬರಬಹುದಾದ ಕಾಯಿಲೆಯಾದರೂ ಬಡತನ, ಅಜ್ಞಾನ, ಮೂಢನಂಬಿಕೆ ಇರುವಲ್ಲಿ, ಜನಸಾಂದ್ರತೆ (overcrowding) ಹೆಚ್ಚಿರುವಲ್ಲಿ, ಮಲಿನ ವಾತಾವರಣದಲ್ಲಿ ವಾಸಿಸುವವರಲ್ಲಿ, ಧೂಮಪಾನಿಗಳು, ಮದ್ಯವ್ಯಸನಿಗಳು, ಅಮಲುಪದಾರ್ಥ ಸೇವಿಸುವವರು, ಮಾನಸಿಕ ರೋಗಿಗಳು, ಬುದ್ಧಿಮಾಂದ್ಯರು ಹಾಗೂ ಕ್ಷೀಣ ಶರೀರಿಗಳು (malnourished), ಮಧುಮೇಹಿಗಳು, ಕ್ಯಾನ್ಸರ್, ಏಡ್ಸ್ ಕಾಯಿಲೆ ಇರುವವರಲ್ಲಿ ಈ ಕಾಯಿಲೆ ಇರುವ ಸಾಧ್ಯತೆ ಹೆಚ್ಚು ಇದೆ. ಅಷ್ಟೆ ಅಲ್ಲದೆ ಅವರಲ್ಲಿ ರೋಗದ ತೀವ್ರತೆಯೂ ಹೆಚ್ಚು ಇರುತ್ತದೆ. ಈ ಕಾರಣದಿಂದಲೇ ಏಷ್ಯಾಖಂಡದಲ್ಲಿ ಅತ್ಯಂತ ಹೆಚ್ಚು ಟಿ.ಬಿ. ರೋಗಿಗಳಿದ್ದರೆ ಅಮೇರಿಕಾ ಹಾಗೂ ಯುರೋಪ್ ಖಂಡಗಳಲ್ಲಿ ಈ ಖಾಯಿಲೆಯು ಅಪರೂಪದಲ್ಲಿ ಕಾಣಸಿಗುತ್ತದೆ.

ನಮ್ಮ ದೇಹದಲ್ಲಿ ಶ್ವಾಸಕೋಶಗಳು ಈ ಖಾಯಿಲೆಗೆ ತುತ್ತಾಗುವ ಮೊದಲ ಹಾಗೂ ಅತೀ ಸಾಮಾನ್ಯ ಅಂಗವಾದರೂ ದೇಹದ ಪ್ರತಿಯೊಂದು ಭಾಗವೂ/ಅಂಗವೂ ಈ ಕಾಯಿಲೆಗೆ ತುತ್ತಾಗುವ ಸಾಧ್ಯತೆ ಇದೆ. ಶ್ವಾಸದ ಮೂಲಕ ಒಳಹೊಕ್ಕಿದ ಈ ಬ್ಯಾಕ್ಟೀರಿಯಾಗಳು ರಕ್ತವನ್ನು ಪ್ರವೇಶಿಸಿ ತಮಗಿಷ್ಟ ಬಂದಲ್ಲಿ ಬಿಡಾರ ಹೂಡುವ ಸಾಮರ್ಥ್ಯ ಹೊಂದಿವೆ. ಹಾಗಾಗಿ ಮೆದುಳು, ಕರುಳು, ಹೃದಯ, ಕಣ್ಣು, ಎಲುಬು, ಮಾಂಸ, ಚರ್ಮ, ಕಿಡ್ನಿ, ಗರ್ಭಕೋಶ ಹೀಗೆ ದೇಹದ ಎಲ್ಲ ಅಂಗಗಳಲ್ಲಿ ಕ್ಷಯರೋಗದ ಬಾಧೆ ಕಂಡುಬರುತ್ತದೆ. ಕ್ಷಯರೋಗಕ್ಕೆ ತುತ್ತಾದ ಅಂಗವು ಶುರುವಿಗೆ ಬಾತುಕೊಳ್ಳುತ್ತದೆ. ನಂತರ ಅದು ಅಲ್ಲಲ್ಲಿ ಕೊಳೆತು ಕೀವಾಗುತ್ತದೆ. ಕಾಯಿಲೆ ಮುಂದುವರಿದಂತೆ ಆ ಅಂಗವು ಒಣಗಿ ನಾರಿನಂತಾಗುವುದು. ಇಂಥಹಾ ಅಂಗಕ್ಕೆ ಸರಿಯಾಗಿ ತನ್ನ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗದಿರಬಹುದು. ಹೀಗೆ ನಿಧಾನವಾಗಿ ಶುರುವಾದ ಖಾಯಿಲೆ ಮಾರಣಾಂತಿಕವಾಗಿ ಪರಿಣಮಿಸುವುದು. ಕೆಲವು ರೋಗಿಗಳಲ್ಲಿ ಕ್ಷಯ ರೋಗವು ಒಂದು ಅಂಗವನ್ನು ಮಾತ್ರ ಬಾಧಿಸಿದ್ದಲ್ಲಿ ಇನ್ನು ಕೆಲವರಲ್ಲಿ ಎರಡು ಮೂರು ಅಂಗಗಳನ್ನು ಬಾಧಿಸಬಹುದು. ಇನ್ನು ಕೆಲವೊಮ್ಮೆ ಈಗ ಒಂದು ಅಂಗವನ್ನು ಮಾತ್ರ ಬಾಧಿಸಿ ಮುಂದೆ ಕೆಲವು ಸಮಯದ ನಂತರ ಬೇರೆ ಅಂಗಗಳನ್ನು ಬಾಧಿಸಬಹುದು.

ಕ್ಷಯರೋಗವು ಬಾಧಿಸಿರುವ ಅಂಗವನ್ನು ಹೊಂದಿಕೊಂಡು ರೋಗದ ಚಿಹ್ನೆಗಳಿರುತ್ತವೆ. ಉದಾಹರಣೆಗೆ ಶ್ವಾಸಕೋಶದ ಟಿ.ಬಿ.ಯಲ್ಲಿ ಕೆಮ್ಮು, ಕಫ ಇದ್ದರೆ ಹೊಟ್ಟೆನೋವು ಮತ್ತು ಭೇದಿ ಕರುಳಿನ ಟಿ.ಬಿ.ಯಲ್ಲಿರುತ್ತದೆ. ಹಾಗೆಯೇ ಮೆದುಳಿನ ಟಿ.ಬಿ.ಯಲ್ಲಿ ಮೆದುಳುಜ್ವರದ ಚಿಹ್ನೆಗಳಿದ್ದರೆ ಕಿಡ್ನಿಯ ಟಿ.ಬಿ.ಯಲ್ಲಿ ಮೂತ್ರದ ಸೋಂಕಿನ ಚಿಹ್ನೆಗಳಿರುತ್ತವೆ. ಕುತ್ತಿಗೆ, ಕಂಕುಳಿನಲ್ಲಿ ದುಗ್ಧರಸಗ್ರಂಥಿಗಳ ಊತವಾಗುವುದು ಈ ಕಾಯಿಲೆಯ ಇನ್ನೊಂದು ಪ್ರಮುಖ ಚಿಹ್ನೆ. ಸಂಜೆಯ ಹೊತ್ತಿಗೆ ಸಣ್ಣಗೆ ಜ್ವರ ಬರುವುದು, ವಿನಾ ಕಾರಣ ಮೈ ಬೆವರುತ್ತಾ ಇರುವುದು, ಹಸಿವೆ ಕಡಿಮೆಯಾಗುವುದು ಮತ್ತು ದೇಹದ ತೂಕ ಕಡಿಮೆಯಾಗುವುದು ಟಿ.ಬಿ. ಖಾಯಿಲೆಯ ಎಲ್ಲಾ ಕೇಸುಗಳಲ್ಲಿ ಕಾಣುವ ಮಾಮೂಲಿ ಚಿಹ್ನೆಗಳು.

ಶ್ವಾಸಕೋಶದಲ್ಲಿ ಟಿ.ಬಿ. ಇರುವುದು ತುಂಬಾ ಸಾಮಾನ್ಯವಾದುದರಿಂದ ಒಂದು ವೇಳೆ 15 ದಿನಕ್ಕಿಂತ ಹೆಚ್ಚು ದಿನ ಕೆಮ್ಮು ಇದ್ದರೆ, ಕಫದಲ್ಲಿ ರಕ್ತ ಇದ್ದರೆ, ಟಿ.ಬಿ. ಖಾಯಿಲೆಯೇನಾದರೂ ಇದೆಯೇ ಎಂದು ಪರೀಕ್ಷಿಸಿಕೊಳ್ಳುವುದು ನಮ್ಮ ದೇಶದ ಪರಿಸ್ಥಿತಿಯಲ್ಲಿ ತುಂಬಾ ಅಗತ್ಯ. ರಕ್ತ ಪರೀಕ್ಷೆ, ಕಫ ಪರೀಕ್ಷೆ, ಎಕ್ಸ್ ರೇ ಪರೀಕ್ಷೆಗಳ ಮೂಲಕ ಮತ್ತು ಮಾಂಟೂ ಪರೀಕ್ಷೆಯೆಂಬ ವಿಶೇಷ ಪರೀಕ್ಷೆಯ ಮೂಲಕ ಟಿ.ಬಿ. ಕಾಯಿಲೆಯ ಇರವನ್ನು ಪತ್ತೆ ಹಚ್ಚಬಹುದು. ಹಾಗೆಯೇ ದೇಹದ ಯಾವುದೇ ಭಾಗದಲ್ಲಿ ಟಿ.ಬಿ.ಖಾಯಿಲೆ ಇದ್ದರೂ ಆ ಅಂಗದ ಸ್ರಾವಗಳನ್ನು ಪರೀಕ್ಷಿಸುವ ಮೂಲಕ ಅಥವಾ ಆ ಅಂಗದ ಸಣ್ಣ ತುಣುಕನ್ನು (Biosoy) ಪರೀಕ್ಷೆಗೊಳಪಡಿಸುವ ಮೂಲಕ ಈ ಕಾಯಿಲೆಯ ಇರವನ್ನು ಖಚಿತಪಡಿಸಿಕೊಳ್ಳಬಹುದು.

ಈಗ ಟಿ.ಬಿ.ಕಾಯಿಲೆಯನ್ನು ಆರು ತಿಂಗಳಿಂದ ಒಂದು ವರ್ಷದ ಒಳಗೆ ಸಂಪೂರ್ಣವಾಗಿ ಗುಣಪಡಿಸಬಲ್ಲಂತಹಾ ಆಧುನಿಕ ಔಷಧಗಳಿವೆ. ಕೆಲವೊಮ್ಮೆ ಶಸ್ತ್ರಚಿಕಿತ್ಸೆಯ ಅಗತ್ಯವೂ ಬೀಳಬಹುದು. ಆದರೆ ಕಾಯಿಲೆ ಗುಣವಾಗುವ ತನಕ ರೋಗಿಯು ತಾಳ್ಮೆ ಮತ್ತು ಶ್ರದ್ಧೆಯಿಂದ ಔಷಧಿಯನ್ನು ತೆಗೆದುಕೊಳ್ಳಬೇಕು ಮತ್ತು ಮದ್ಯಪಾನ, ಧೂಮ್ರಪಾನ ವರ್ಜಿಸಬೇಕು ಹಾಗೂ ತನ್ನ ಮಧುಮೇಹದಂತಹಾ ಇತರ ಕಾಯಿಲೆಗಳನ್ನು ಹತೋಟಿಯಲ್ಲಿಟ್ಟಿರಬೇಕು ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು.

ಟಿ.ಬಿ. ಖಾಯಿಲೆಯ ಚಿಕಿತ್ಸೆಯನ್ನು ನಾನಾ ಕಾರಣಗಳಿಂದ ಅರ್ಧಕ್ಕೆ ನಿಲ್ಲಿಸಿದವರು, ಕಾಯಿಲೆಯ ಚಿಹ್ನೆಗಳನ್ನು ನಿರ್ಲಕ್ಷಿಸಿ ಚಿಕಿತ್ಸೆ ಮಾಡದಿರುವವರು, ಹೀಗೆ ತನ್ನೊಳಗಿನ ಕಾಯಿಲೆಯನ್ನು ಗುಪ್ತವಾಗಿಟ್ಟುಕೊಂಡು ಇತರರಿಗೆ ಈ ಖಾಯಿಲೆಯನ್ನು ಉಚಿತವಾಗಿ ಹಂಚುವವರಿಂದಾಗಿ ಈ ಖಾಯಿಲೆ ನಮ್ಮ ದೇಶದಲ್ಲಿ ಹೆಮ್ಮರವಾಗಿ ಬೆಳೆದಿದೆ. ಅಷ್ಟೇ ಅಲ್ಲದೆ ಇಂತಹವರಿಂದಾಗಿಯೇ ಇತ್ತೀಚೆಗೆ ಆಧುನಿಕ ಔಷಧಿಗಳಿಗೂ ಬಗ್ಗದ ಟಿ.ಬಿ. ಖಾಯಿಲೆ (multidrug resistant tuberculosis) ಹೊಸತಾಗಿ ಕಂಡು ಬಂದಿರುವುದು ವೈದ್ಯಲೋಕದಲ್ಲಿ ತಳಮಳ ಮೂಡಿಸಿದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

2011-12ನೇ ಸಾಲಿಗೆ ಶ್ರೀ ಸಭೆಯ ವತಿಯಿಂದ ಸಮಾಜದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ಪಿಯುಸಿಯಿಂದ ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಅರ್ಹ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನ ಕೋರಿ ಅರ್ಜಿಯನ್ನು ನಿಗದಿತ ಅರ್ಜಿ ಫಾರಂನಲ್ಲಿ ತಾ.31-10-2011ರ ಒಳಗೆ ಸಲ್ಲಿಸಲು ಕೋರಲಾಗಿದೆ. ಅರ್ಜಿ ಫಾರಂಗಳು ಈ ಕೆಳಗಿನ ಸ್ಥಳಗಳಲ್ಲಿ ದೊರೆಯುತ್ತದೆ.

1) ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ (ರಿ.), ಮಂಗಳೂರು
2) ಪ್ರಮೋದ್ ಆಟೋಮೊಬೈಲ್ಸ್, ಕರಂಗಲ್ಪಾಡಿ, ಮಂಗಳೂರು
3) ವಿಶ್ರಾಮ್ ಮೋಟರ್ಸ್ ಕೊಡಿಯಾಲ್‌ಬೈಲ್, ಮಂಗಳೂರು
4) ಶ್ರೀ ಶಾರದಾ ಮಂಟಪ, ಉಡುಪಿ
5) ಶ್ರೀ ಕೆ. ಭೋಜರಾವ್, ಸುಲಗ್ನ ಕುಕ್ಕಿಕಟ್ಟೆ, ಉಡುಪಿ
6) ಶ್ರೀ ಉಮೇಶ್ ಶ್ಯಾನ್‌ಭಾಗ್, ಮುಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ
7) ಶ್ರೀ ಎಂ.ಎಸ್. ಅರುಣ್‌ಕುಮಾರ್, ದಿಶಾಬೇಕರಿ, ಉಜಿರೆ
8) ಶ್ರೀ ಎನ್.ಎಸ್.ನಟರಾಜ, ಪುತ್ತೂರು
9) ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ (ಪುತ್ತೂರು ಶಾಖೆ)
10) ಡಾ। ಸದಾಶಿವ ರಾವ್, ಸುಳ್ಯ

ಹೆಚ್ಚಿನ ಮಾಹಿತಿಯನ್ನು ಶ್ರೀ ಕರುಣ್ ರಾವ್ ಬೆಳ್ಳೆ (ಮೊಬೈಲ್ : 9243309120) ಇವರಲ್ಲಿ ಪಡೆಯಬಹುದು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಶ್ರೀ ದಯಾನಂದ ಎಸ್.ರಾವ್ ಎಜುಕೇಷನಲ್ ಟ್ರಸ್ಟ್, ಬೆಂಗಳೂರು ವತಿಯಿಂದ 2011-12 ಸಾಲಿಗೆ ರೂ.3,00,000/- ದೇಣಿಗೆ ಶ್ರೀ ಸಭೆಯ ಸಾಲ ವಿದ್ಯಾರ್ಥಿ ನಿಧಿಗೆ ಬಂದಿರುತ್ತದೆ. ವೃತ್ತಿ ಶಿಕ್ಷಣ ಪಡೆಯದ ಅರ್ಹ ವಿದ್ಯಾರ್ಥಿಗಳಿಂದ ಸಾಲ ವಿದ್ಯಾರ್ಥಿ ವೇತನವನ್ನು ಕೋರಿ ಬಿಳಿ ಹಾಳೆಯಲ್ಲಿ ಅರ್ಜಿಯನ್ನು ಕೋರಲಾಗಿದೆ. ಅರ್ಜಿಗೆ ಅಂಕಪಟ್ಟಿ ಪ್ರತಿ ಹಾಗೂ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ಕಲಿಕಾ ಪ್ರಮಾಣ ಪತ್ರದ ಪ್ರತಿಯನ್ನು ಲಗ್ತೀಕರಿಸಬೇಕು.

ಹಿಂದಿನ ವರ್ಷ ಸಾಲ ವಿದ್ಯಾರ್ಥಿ ವೇತನವನ್ನು ಪಡೆದ ವಿದ್ಯಾರ್ಥಿಗಳು 2011-12ನೇ ಸಾಲಿನ ಸಾಲ ವಿದ್ಯಾರ್ಥಿ ವೇತನದ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು (ಫೋನ್ : 0824-2491895) ಸಂಪರ್ಕಿಸಬೇಕು.

ಹೆಚ್ಚಿನ ಮಾಹಿತಿಯನ್ನು ಶ್ರೀ ಕರುಣ್‌ರಾವ್ ಬೆಳ್ಳೆ (ಮೊಬೈಲ್ : 9243309120) ಇವರಲ್ಲಿ ಪಡೆಯಬಹುದು.

**- ಶ್ರೀ ಕರುಣ್‌ರಾವ್ ಬೆಳ್ಳೆ , ಕಾರ್ಯದರ್ಶಿ**

ಅರ್ಜಿ ನಮೂನೆಯನ್ನು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಇಲ್ಲಿಯೂ ಪಡೆಯಬಹುದು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ದಿವಂಗತ ಕೂಡ್ಲು ಪ್ರೇಮಾವತಿ ಅಮ್ಮ ಅವರ ಸ್ಮರಣೆಗೆ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಶ್ರೀ ಕೂಡ್ಲು ವಿಷ್ಣು ಶಾನುಭೋಗರು ತಮ್ಮ ಧರ್ಮಪತ್ನಿ ದಿವಂಗತ ಕೂಡ್ಲು ಪ್ರೇಮಾವತಿ ಅಮ್ಮ ಅವರ ಸ್ಮರಣೆಗೆ ವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಸಮಾಜದ ಒಬ್ಬ ವಿದ್ಯಾರ್ಥಿಗೆ ಆರ್ಥಿಕ ಸಹಾಯವನ್ನು ಒದಗಿಸಲು ರೂ.70,000/-ದ ನಿಧಿಯನ್ನು ಸ್ಥಾಪಿಸಿರುವರು. ಈ ನಿಧಿಯಿಂದ ಸಹಾಯಧನವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಕರೆಯಲಾಗಿದೆ. ಬಿಳಿ ಹಾಳೆಯಲ್ಲಿ ಅರ್ಜಿಯನ್ನು ಬರೆದು ಹಿಂದಿನ ವರ್ಷದ ಅಂಕಪಟ್ಟಿ ಹಾಗೂ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಿ ತಾ.30-10-2011ರ ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಗೆ ಸಲ್ಲಿಸಲು ಕೋರಲಾಗಿದೆ.

**- ಶ್ರೀ ಕರುಣ್‌ರಾವ್ ಬೆಳ್ಳೆ , ಕಾರ್ಯದರ್ಶಿ**


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಬುಧವಾರ : **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.18-07-2011) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.13-08-2011 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.20-07-2011 ಆಷಾಢ ಕೃಷ್ಣಪಕ್ಷ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.10-08-2011 ಶ್ರಾವಣ ಶುದ್ಧ ದ್ವಾದಶಿ ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**







**RAJESH POWER PRESS**

PRINTERS & PUBLISHERS


DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com

**QUALITY FIRST AND ALWAYS**

**ಎಮ್. ದೇವಾನಂದ್ ಭಟ್**  Cell :9845644556

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ




**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.

## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org